Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

9ನೇ ಪುಟದಿಂದ.....

# ಸಹಕಾರಿ ಸಂಸ್ಥೆಗಳಲ್ಲಿ ಆಯವ್ಯಯ

ಹೇಳುವುದಕ್ಕಿಂತ ಇಂಗ್ಲೀಷನಲ್ಲಿ ಬಜೆಟ್ ಎನ್ನುವುದೇ ಹೆಚ್ಚು ಸರಳವೆನಿಸುತ್ತದೆ. ಆದರೆ ವಿಚಿತ್ರ ಎಂದರೆ ಆಯ-ವ್ಯಯ ಎಂಬ ಪದಗಳಲ್ಲಿ ಇರುವ ವೈಜ್ಞಾನಿಕ ಅರ್ಥ ಬಜೆಟ್ ಪದದಲ್ಲಿ ಇಲ್ಲ.

ಬಜೆಟ್ ಎಂಬ ಪದದ ಮೂಲವನ್ನು ಪಾಶ್ಚಾತ್ಯ ಭಾಷಾ ಶಾಸ್ತ್ರಜ್ಞರೂ ಹುಡುಕಿಕೊಂಡು ಹೋಗಿದ್ದಾರೆ. (ನಮ್ಮಲ್ಲೇ "ಇಗೋಕನ್ನಡ" ಎಂಬ 3 ಸಂಪುಟಗಳನ್ನು ಬರೆದ ವೆಂಕಟಸುಬ್ಬಯ್ಯನವರ ರೀತಿಯಲ್ಲಿ). ಈ ಪದಕ್ಕೆ ಮೂಲ ಅರ್ಥ ಚರ್ಮದ ಚೀಲ ಎಂದು. ಫ್ರೆಂಚ್ ಭಾಷೇಯಲ್ಲಿ ಈ ಪದ ಚರ್ಮದ ಸಣ್ಣ ಚೀಲ, ದುಡ್ಡು ಇಟ್ಟುಕೊಳ್ಳಲು ಅನುಕೂಲವಾಗುವಂತಹದು ಎಂಬ ಅರ್ಥದಲ್ಲಿ 15ನೇಶತಮಾನದಿಂದ ಬಳಕೆಯಲ್ಲಿತ್ತಂತೆ ಫ್ರೆಂಚರಿಗೆ ಇದು ಲ್ಯಾಟಿನ್ ಭಾಷೆಯಿಂದಬಂತಂತೆ. ಕಾಲಕ್ರಮೇಣ ದೇಶದ ಹಣಕಾಸಿನ ಮಂತ್ರಿಗಳು ದೇಶದ ಆಯುವ್ಯಯಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಈ ಚರ್ಮದ ಚೀಲ (ಪರ್ಸ್ ಅಥವಾ ಪೌಜ್ ಅಥವಾ ವ್ಯಾಲೆಟ್)ಗಳಲ್ಲಿ ಇಟ್ಟುಕೊಳ್ಳುತ್ತಿದ್ದುದರಿಂದ ಬಡ್ಜೆಟ್ ಎಂದು ಉಚ್ಚರಿಸಲ್ಪಡುತ್ತಿದ್ದ ಈ ಪದಕ್ಕೆ ದೇಶದ ಆಯವ್ಯಯ ಎಂಬ ಅರ್ಥ ಬರಲು ಶುರುವಾಯಿತಂತೆ.

1733ನೇ ವರ್ಷದಿಂದ ಈ ಅರ್ಥ ಬಂದಿರಬಹುದು ಎಂದೂ ಹೇಳುತ್ತಾರೆ. ಆಗ (Budget book opened) ಎಂಬ ಕರಪತ್ರದಲ್ಲಿ ಇಂಗ್ಲೆಂಡ್ ದೇಶದ ಹಣಕಾಸಿನ ಅಂದಾಜುಗಳನ್ನು ಮಂಡಿಸಲು ತಮ್ಮ ಚರ್ಮದ ಚೀಲದಿಂದ ಕಾಗದ ಪತ್ರಗಳನ್ನು ತೆರೆದರು ಎಂದು ಬರೆದರಂತೆ. ಆದರೆ ಇದನ್ನು ವ್ಯಂಗ್ಯವಾಗಿ ಬರೆದಿದ್ದರು ಎಂದೂ, ಯಾವುದೇ ವ್ಯಂಗ್ಯವಿಲ್ಲದೆ ಬಜೆಟ್ (Budget) ಎಂದರೆ ಆಯವ್ಯಯ ಎಂಬ ಅರ್ಥ 1764 ನೇ ಇಸವಿಯಿಂದ ಬಂತು ಎನ್ನುತ್ತಾರೆ. ಸಮಯ ಕಳೆದಂತೆ ಈ ಪದ ದೇಶದ ಆಯವ್ಯಯ ಮಾತ್ರವಲ್ಲದೆ ಯಾವುದೇ ಆಯವ್ಯಯ ಪತ್ರಿಕೆಯನ್ನು ತಿಳಿಸಲೂ ಅನ್ವಯವಾಗತೊಡಗಿತು. ಈಗಂತೂ ಒಬ್ಬ ವ್ಯಕ್ತಿ ಅಥವಾ ಕುಟುಂಬ ಅಥವಾ ಸಂಸ್ಥೆ ಅಥವಾ ದೇಶ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಅವಧಿ (ಅದು ವಾರ ಅಥವಾ ತಿಂಗಳು ಸಹ ಆಗಿರಬಹುದು – ಸಾಧಾರಣವಾಗಿ ಒಂದು ಆರ್ಥಿಕ ವರ್ಷ, ಈಗ ಇದು ಒಂದು ಏಪ್ರಿಲ್ 1 ರಿಂದ ಮಾರ್ಚ್ 31ರವರೆಗೆ)ಗೆ ಸಂಬಂಧಿಸಿದಂತೆ ಆದಾಯಗಳ ಮತ್ತು ವೆಚ್ಚಗಳ ಅಂದಾಜಿಗೆ ತಿಳಿಸಲು ಎಲ್ಲ ಕಡೆ ಬಳಕೆಯಲ್ಲಿದೆ. ಇದನ್ನು ಇಂಗ್ಲೀಷಿನಲ್ಲಿ ನಾವೀಗ ಬಜೆಟ್ ಎಂದು ಉಚ್ಚರಿಸುತ್ತಿದ್ದೇವೆ ಆದರೂ ನಮ್ಮಲ್ಲಿ ಆಯವ್ಯಯ ಎಂದರೆ ಅಂದಾಜು ಖರ್ಚು-ವೆಚ್ಚಪಟ್ಟಿ ತಯಾರಿಸುವುದು ಎಂಬ ಕಲ್ಪನೆಯೇ ಸಾಧಾರಣವಾಗಿ ಬಳಕೆಯಲ್ಲಿದೆ, ಏಕೆಂದರೆ ಖರ್ಚು, ವೆಚ್ಚ, ಆದಾಯ ಮುಂತಾದವುಗಳನ್ನು ಅಂದಾಜಿ ಸಲು ಒಂದು ಅವಧಿ ಬೇಕು. ಆ ಅವಧಿ ಸಾರ್ವತ್ರಿಕವಾಗಿ, ಒಂದು ವರ್ಷ ಆಗಿದೆ. ಇದಕ್ಕೆ ಜಗತ್ತಿನಾದ್ಯಂತ ಆರ್ಥಿಕ ವರ್ಷ ಎಂದೇ ಕರೆಯುತ್ತಾರೆ. ಇದನ್ನು ಮನಗಂಡೇ ಸಹಕಾರಿ ಕಾಯಿದೆ ಕೂಡ 1984 ಹಿಂದೆಯೇ ತಿದ್ದುಪಡಿ ಆಗಿ ವರ್ಷ ಎಂದರೆ ಏಪ್ರಿಲ್ 1 ರಿಂದ ಪ್ರಾರಂಭವಾಗುವ ಒಂದು ವರ್ಷ ಎಂದು ಆಗಿದೆ ಅದಕ್ಕೆ ಮುಂಚೆ ಕೃಷಿ ಪತ್ತಿನ ಸಹಕಾರಿ ಸಂಘಗಳು ಜುಲೈ ಒಂದರಿಂದ, ಸಹಕಾರಿ ಸಕ್ಕರೆ ಕಾರ್ಖಾನೆಗಳು ಅಕ್ಟೋಬರ್ ಒಂದರಿಂದ ಇತ್ಯಾದಿಯಾಗಿ ಸಹಕಾರಿ ಕ್ಷೇತ್ರಗಳಲ್ಲಿ ಬೇರೆ ಬೇರೆ ವರ್ಷಳಿರುತ್ತಿದ್ದವು.

ಸಹಕಾರಿ ಸಂಘಗಳೇ ಆಗಲಿ ಬೇರೆ ಯಾವುದೇ ಸಂಸ್ಥೆಯೇ ಆಗಲಿ ಬೇರೆ ಅವಧಿಗೆ ಆಯವ್ಯಯ ಅಂದಾಜು ಮಾಡಬಾರದೆಂದೇನೂ ಇಲ್ಲ, ಆದರೆ ಲೆಕ್ಕ ಪರಿಶೋಧನೆ ಮಾಡಿಸಲು, ಕಾನೂನು ಬದ್ಧ ಆಸ್ತಿ ಜವಾಬ್ದಾರಿ ತಃಖ್ತೆ ಪ್ರಕಟಿಸಲು, ಆದಾಯ ತೆರಿಗೆ ಪಾವತಿಸಲು, ಒಟ್ಟಿನಲ್ಲಿ ಹೊರ ಜಗತ್ತಿನೊಡನೆ ವ್ಯವಹರಿಸಲು ಆರ್ಥಿಕ ತ:ಖ್ತೆಗಳನ್ನು ಆರ್ಥಿಕ ವ್ಯವಹಾರ ಅಂದಾಜು ಮಾಡುವುದು ಕಡ್ಡಾಯವಾಗಿರ ೨ತ್ತದೆಯಾದ್ದರಿಂದ ಆಯವ್ಯಯವನ್ನೂ ಆರ್ಥಿಕ ವರ್ಷದಲ್ಲಿ ಮಾಡುವುದು ಅಗತ್ಯವಾಗುತ್ತದೆ. ಇದಕ್ಕೆ ಪೂರಕವಾಗಿ ಬೇರೆ ಬೇರೆ ಅವಧಿಗಳಿಗೆ ಆಯವ್ಯಯ ಅಂದಾಜುಗಳನ್ನು ಮಾಡಿಕೊಳ್ಳಬಹುದು. ಸಹಕಾರಿ ಸಂಘಗಳಲ್ಲಿ ವಾರ್ಷಿಕ ಆಯವ್ಯಯ ತಯಾರಿಸುವ ವ್ಯವಸ್ಥೆಗೆ ಬಹುಶಃ ಶತಮಾನಕ್ಕೂ ಮೀರಿದ ಇತಿಹಾಸ ಇದೆ. ಏಕೆಂದರೆ ಸಂಘಗಳ ವಾರ್ಷಿಕ ಮಹಾಸಭೆಯ ಮುಂದೆ ಇರುವ ಕರ್ತವ್ಯಗಳಲ್ಲಿ ಒಂದೆಂದರೆ ವಾರ್ಷಿಕ ಆಯವ್ಯಯವನ್ನು ಅನುಮೋದಿಸುವುದು. ಆದರೆ ಇತಿಹಾಸದ ಅವಧಿ ದೀರ್ಘವಾಗಿದ್ದರೂ ಈ ವ್ಯವಸ್ಥೆಯ ಗುಣಮಟ್ಟ ನಾವು ನಿರೀಕ್ಷಿಸುವಷ್ಟು ಗಟ್ಟಿಯಾಗಿ ಇಲ್ಲ ಎಂದೇ ಹೇಳಬೇಕು ಇದಕ್ಕೆ ಕಾರಣ ಈಗ್ಗೆ 30 ವರ್ಷಗಳ ಹಿಂದಿನವರೆಗೂ ಬಹುತೇಕ ಸಂಘಗಳು ಕೃಷಿಗೆ ಮತ್ತು ಸಣ್ಣ ಸಾಲಗಳಿಗೇ ಸೀಮಿತವಾಗಿದ್ದುದು. ಆದ್ದರಿಂದ ಆಯವ್ಯಯ ತಯಾರಿಕೆ ಯಾಂತ್ರಿಕವಾಗಿಯೇ ಬಹಳಷ್ಟು ಸಂಘಗಳಲ್ಲಿ ಸಾಗುತ್ತಿತ್ತು. ಆದರೆ ಇದರಿಂದ ಅಂತಹ ದೊಡ್ಡ ಲೋಪವೇನೂ ಆಗುತ್ತಿರಲಿಲ್ಲ, ಏಕೆಂದರೆ ಸಣ್ಣ ಸಣ್ಣ ಸಂಸ್ಥೆಗಳಲ್ಲಿ, ಸಂಸ್ಥೆಯ ಜವಾಬ್ದಾರಿ ಹೊತ್ತಿದ್ದಂತಹ ಕೆಲವೊಂದು ವ್ಯಕ್ತಿಗಳು "ಮಾನಸಿಕ ಆಯವ್ಯಯ" ತಯಾರಿಸಿಕೊಂಡು ಸಂಸ್ಥೆ ನಡೆಸುವ ಪದ್ಧತಿ ಜಗತ್ತಿನಾದ್ಯಂತ ಹಿಂದೆ ನಡೆಯುತ್ತಿತ್ತು. ಯಶಸ್ವಿಯಾಗಿರುವ ಎಲ್ಲ ಆರ್ಥಿಕ ಸಂಸ್ಥೆಗಳಲ್ಲೂ, ಮಾನಸಿಕವೇ ಆಗಲಿ ಅಥವಾ ಔಪಚಾರಿಕವೇ ಆಗಿರಲಿ ಈ ತರಹದ ಒಂದು ವ್ಯವಸ್ಥೆ ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ಇದ್ದೇ ಇರುತ್ತದೆ.

ಮುಂದುವರೆಯುವುದು...

## ಒತ್ತಡ ನಿರ್ವಹಣೆ : ಭಾಗ-4 ಇಂದು ಏನಾಗಿದೆ? (10ನೇ ಪುಟದಿಂದ)

**ಮನೋ-ಶಾರೀರಿಕ ರೋಗಗಳು**

* ಆಗಾಗ ತಲೆ ನೋವು
* ತಲೆ, ಕತ್ತು, ಭುಜಗಳಲ್ಲಿ ನೋವು
* ಚರ್ಮ ಒಣಗುವುದು
* ಮಲಬದ್ಧತೆ, ಅಲ್ಸರ್
* ಬಿ.ಪಿ. ಷುಗರ್
* ಹಾರ್ಟ್ ಪ್ರಾಬ್ಲಮ್
* ಬೇಸರ, ಮುಂಗೋಪ, ಖಿನ್ನತೆ
* ಅತಿನಿದ್ರೆ/ನಿದ್ರೆಯೇ ಇಲ್ಲದಿರುವುದು.
* ಅಂತರ್ಮುಖಿಯಾಗಿರುವುದು.
* ಧೂಮಪಾನ-ಮದ್ಯಪಾನದತ್ತ ಗಮನ
* ಆತ್ಮವಿಶ್ವಾಸ ಕ್ಷೀಣಿಸುವುದು...ಇತ್ಯಾದಿ

ಈ ರೀತಿ ಆದಾಗ, ಆ ವ್ಯಕ್ತಿಯ ಮೇಲೆ ಯಾವ ಪರಿಣಾಮ ಬೀರುತ್ತದೆ... ಗೊತ್ತೆ..?

* ಅವನಿಗೆ ಅವನ ಕೆಲಸದ ಮೇಲಿನ ಆಸಕ್ತಿ ಕಡಿಮೆಯಾಗುತ್ತದೆ.
* ಅವನು ತನ್ನ ಜೀವನದ ಬಗ್ಗೆ ಅಥವಾ ಕೆಲಸದ ಬಗ್ಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳಲು ಅಸಮರ್ಥನಾಗುತ್ತಾನೆ.
* ಇದರಿಂದಾಗಿ ಅವನ ಮನೆಯ ಸಮಸ್ಯೆಗಳು ಕೈಮೀರಿ ಹೋಗುತ್ತವೆ.
* ಅವನ ಉದ್ಯೋಗದಲ್ಲಿ ಸಮಸ್ಯೆಗಳು ಜಾಸ್ತಿಯಾಗುತ್ತವೆ.
* ಅವನ ಸಂಬಂಧಗಳಲ್ಲಿ ಘರ್ಷಣೆ ಉಂಟಾಗುತ್ತವೆ.
* ಅವನ ವ್ಯವಹಾರಗಳು ಜಟಿಲವಾಗುತ್ತವೆ.

ಒಟ್ಟಿನಲ್ಲಿ ಅವನ ಜೀವನ ನಿಸ್ಸಾರವಾಗುತ್ತದೆ...ಅವನಿಗೆ ಒಂದು ರೀತಿಯ ಜಿಗುಪ್ಸೆ ಕಾಡುತ್ತದೆ...ಅವನು ಎಲ್ಲದರಲ್ಲೂ ವಿಫಲನಾಗುತ್ತಾನೆ. ಅವನಿಗೆ, ನೆಮ್ಮದಿಯ ಜೀವನ ಮರೀಚಿಕೆಯಾಗುತ್ತದೆ. ■

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1. ದೂ. 0831-2401551

**ಗಮನಿಸಿ :**

"ಯಶಸ್ವಿ ಸಹಕಾರಿಗಳ ಯಶೋಗಾಥೆಯ ಅಂಕಣದಲ್ಲಿ ನಿಮ್ಮ ಸಹಕಾರಿಯ ಪ್ರಗತಿಯನ್ನು ಪ್ರಕಟಿಸಬೇಕೇ? ಹಾಗಿದ್ದಲ್ಲಿ ತಡಮಾಡದೆ ನಿಮ್ಮ ಸಹಕಾರಿಯ ಪ್ರಗತಿಚಿತ್ರ ಹಾಗೂ ಪ್ರಕಟಣೆಗೆ ಯೋಗ್ಯ 2-3 ಛಾಯಾಚಿತ್ರಗಳನ್ನು ಸಿ.ಡಿ.ಯಲ್ಲಿ ಹಾಕಿ ಕಳುಹಿಸಿಕೊಡಿ. "ವ್ಯಕ್ತಿ ಅಂಕಣದಲ್ಲಿ ನಿಮಗೆ ಪರಿಚಯವಿರುವ ಉತ್ತಮ ಸಹಕಾರಿಗಳ ಪರಿಚಯವನ್ನು ಪ್ರಕಟಿಸಬೇಕೆ? ಹಾಗಿದ್ದಲ್ಲಿ ಅವರ ಬಗ್ಗೆ ಸಾಧನೆಯ ವಿವಗಳನ್ನು ಹಾಗೂ ಒಂದು ಇತ್ತೀಚಿನ ಛಾಯಾಚಿತ್ರವನ್ನು ಕಳುಹಿಸಿ. ಇದರಲ್ಲಿ ಅವರ ಜನನ ತಾರೀಖು, ಹುಟ್ಟಿದ ಸ್ಥಳ, ತಂದೆ – ತಾಯಿಯರ ಹೆಸರು, ಕುಟುಂಬದ ವೃತ್ತಿ, ವಾಸಿಸುವ ಸ್ಥಳ, ಸೇವೆ ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಗಳ ಹೆಸರು, ಪಡೆದಿರುವ ಪ್ರಶಸ್ತಿಗಳು, ಇತರೆ ಕ್ಷೇತ್ರದಲ್ಲಿ ಅಂದರೆ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಾಹಿತ್ಯ, ಕಲೆ, ಸಂಗೀತ, ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಮತ್ತು ಸೇವೆ ಸಲ್ಲಿಸುತ್ತಿರುವ ಹಾಗೂ ಪಡೆದ ಪ್ರಶಸ್ತಿಗಳ ವಿವರ ಮತ್ತು ಸಹಕಾರಿ ಕ್ಷೇತ್ರದ ಬಗ್ಗೆ ಅವರ ಅಭಿಪ್ರಾಯ ಮತ್ತು ಯುವಕರಿಗೆ ಅವರ ಸಂದೇಶಗಳು ಇರಬೇಕು.

ಇವರಿಂದ ಪ್ರಕಟಿತ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಮೊದಲ ಮಹಡಿ, ನಂ. 132, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು– 560 002
ಸಂಪಾದಕ, ಪ್ರಕಾಶಕ: ಶರಣಗೌಡ ಜಿ. ಪಾಟೀಲ, ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು ಸಂಚಿಕೆ ಸಿದ್ಧತೆ ವಿ.ಜೆ.ಕಾರಕೂನ

# ಸ್ವಾಭಿಮಾನಿ ಸಹಕಾರಿ

ದಶಮಾನೋತ್ಸವ ವರ್ಷ


ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

62ನೇ
ಗಣರಾಜ್ಯೋತ್ಸವ ಸಂಭ್ರಮ

ಸಂಪುಟ 8 : ಸಂಚಿಕೆ 1 : ಜನವರಿ 2011 : * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/- : ಬೆಲೆ ₹ 5


## ದಶಮಾನೋತ್ಸವ ಹಾಗೂ ಸೌಹಾರ್ದ ಸಹಕಾರಿ ದಿನದ ಸಂದರ್ಭದಲ್ಲಿ ಗಣ್ಯರ ಸಂದೇಶಗಳು



**ಶ್ರೀ ಬಿ.ಎಸ್.ಯಡಿಯೂರಪ್ಪ**
ಮಾನ್ಯ ಮುಖ್ಯ ಮಂತ್ರಿಗಳು

ರಾಜ್ಯದ ಸೌಹಾರ್ದ ಸಹಕಾರ ಚಳುವಳಿಯ ದಶಮಾನೋತ್ಸವ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ನೂತನ ವರ್ಷದ ಸೌಹಾರ್ದ ಸಹಕಾರಿಗಳಿಗೆಲ್ಲ ಶುಭಾಶಯಗಳು. ರಾಜ್ಯದ ಸೌಹಾರ್ದ ಸಹಕಾರಿ ಬೆಳವಣಿಗೆಗೆ ರಾಜ್ಯ ಸರಕಾರದ ಸಂಪೂರ್ಣ ಬೆಂಬಲವಿದೆ. ಸದಸ್ಯರ ಹಾಗೂ ಸಾರ್ವಜನಿಕರ ಆಶೋತ್ತರಗಳಿಗೆ ಸ್ಪಂದಿಸಿ ಕಾರ್ಯನಿರ್ವಹಿಸಬೇಕೆಂದು ಆಶಿಸುತ್ತೇನೆ.



**ಶ್ರೀ ಲಕ್ಷ್ಮಣ ಸವದಿ**
ಮಾನ್ಯ ಸಹಕಾರ ಮಂತ್ರಿಗಳು

ಸೌಹಾರ್ದ ಸಹಕಾರಿಗಳಿಗೆ ನೂತನ ವರ್ಷದ ಶುಭಾಶಯಗಳು. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಹಾಗೂ ಕಾರ್ಯಾಚರಣೆ ತೃಪ್ತಿಕರವಾಗಿದೆ. ಸೌಹಾರ್ದ ಸಹಕಾರಿಗಳು ಸ್ವಾಯತ್ತತೆ ಸ್ವಯಂ ಆಡಳಿತ ಹಾಗು ಸ್ವಯಂ ನಿಯಂತ್ರಣ ವ್ಯವಸ್ಥೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡು ಕಾರ್ಯನಿರ್ವಹಿಸಬೇಕು. ಸ್ವಾಯತ್ತತೆ ಸ್ವೇಚ್ಛಾಚಾರವಾಗಿ ಪರಿಣಮಿಸಿದಲ್ಲಿ ಸಮಗ್ರ ವ್ಯವಸ್ಥೆಯ ಮೇಲೆ ದುಷ್ಪರಿಣಾಮವುಂಟಾಗುತ್ತದೆ. ಸದಸ್ಯರ ಹಾಗೂ ಸಾರ್ವಜನಿಕರ ಹಿತ ರಕ್ಷಣೆಗೆ ಆದ್ಯತೆಯಿರಬೇಕು ಮಾದರಿ ವ್ಯವಸ್ಥೆಯಾಗಿ ರೂಪುಗೊಳ್ಳಲಿ ಎಂದು ಆಶಿಸುತ್ತೇನೆ.




**ಶ್ರೀ ಹೆಚ್.ಕೆ.ಪಾಟೀಲ್**
ಮಾಜಿ ಸಚಿವರು, ಅಧ್ಯಕ್ಷರು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು.

ಸೌಹಾರ್ದ ಸಹಕಾರಿಗಳಿಗೆ ನೂತನ ವರ್ಷದ ಶುಭಾಶಯಗಳು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆ ಸಂತೋಷದಾಯಕವಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರ ಇನ್ನೂ ಹೆಚ್ಚು ಬಲಶಾಲಿಯಾಗಿ ಎತ್ತರಕ್ಕೆ ಬೆಳೆಯಬೇಕು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ದೇಶದಲ್ಲಿ ಮಾದರಿ ಸೌಹಾರ್ದ ಸಹಕಾರಿ ವ್ಯವಸ್ಥೆಯಾಗಿ ಅನುಕರಣೆಗೆ ಯೋಗ್ಯವಾಗಿ ಬೆಳೆಯಬೇಕು.



**ಶ್ರೀ ಎಸ್.ಎಸ್.ಪಾಟೀಲ್**
ಮಾಜಿ ಸಹಕಾರ ಮಂತ್ರಿಗಳು

ರಾಜ್ಯದ ಸಹಕಾರ ಚಳುವಳಿಯ ಆರೋಗ್ಯಕರ ಬೆಳವಣಿಗಾಗಿ ಸಹಕಾರಿ ಆಡಳಿತದಲ್ಲಿ ಬಾಹ್ಯ ಹಸ್ತಕ್ಷೇಪವನ್ನು ಕಡಿಮೆ ಮಾಡುವ ಆರ್ಥಿಕ ಹಾಗೂ ಆಡಳಿತ ಸ್ವಾತಂತ್ರವನ್ನು ನೀಡುವ ವ್ಯವಸ್ಥೆಯ ಅಗತ್ಯತೆಯನ್ನು ಪರಿಗಣಿಸಿ ಸಹಕಾರಿಗಳ ಹಲವಾರು ವರ್ಷದ ಬೇಡಿಕೆಯನ್ನು ಗಮನಿಸಿ ಹೊಸ ಸೌಹಾರ್ದ ಸಹಕಾರಿ ಕಾಯ್ದೆಯನ್ನು 2001 ರಲ್ಲಿ ಜಾರಿಗೆ ಕೊಡಲಾಗಿದೆ. ಈ ವ್ಯವಸ್ಥೆಯಲ್ಲಿನ ಇದುವರೆಗಿನ ಬೆಳವಣಿಗೆ ಕಾರ್ಯಾಚರಣೆ ತೃಪ್ತಿಕರವಾಗಿದೆ. ಆದರೂ ಇನ್ನೂ ಹೆಚ್ಚಿಗೆ ಬೆಳೆದು ಉತ್ತಮ ಆರ್ಥಿಕ ಸಂಘಟನೆಗಳಾಗಿ ಬೆಳೆಯಬೇಕು ಸಹಕಾರಿ ಕ್ಷೇತ್ರ ಸಂಖ್ಯಾತ್ಮಕವಾಗಿ ಬೆಳೆಯುವ ಜೊತೆಗೆ ಗುಣಾತ್ಮಕವಾಗಿ ಬೆಳೆದು ದೇಶದ ಅರ್ಥವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುವಂತಾಗಲಿ ಎಂದು ಅಪೇಕ್ಷಿಸುತ್ತೇನೆ.



**ಶ್ರೀ ರಾಮಾಜೋಯಿಸ,** ರಾಜ್ಯಸಭಾ ಸದಸ್ಯರು,
ಮಾಜಿ ರಾಜ್ಯಪಾಲರು ಹಾಗೂ ನಿವೃತ್ತ ಮುಖ್ಯ ನ್ಯಾಯಾಧೀಶರು.

ಮನುಷ್ಯ ಸಂಘ ಜೀವಿ. ಪರಸ್ಪರ ಸಹಕಾರವಿಲ್ಲದೆ, ಸುಖಶಾಂತಿಯಿಂದ ಬಾಳಲು ಸಾಧ್ಯವಿಲ್ಲ. ಈ ವಿಷಯವನ್ನು, ಋಗ್ವೇದದಲ್ಲಿ ಬಹಳ ಪುರಾತನ ಕಾಲದಲ್ಲಿಯೇ ಘೋಷಿಸಲಾಗಿದೆ. ಅದು ಹೀಗಿದೆ.
"ಸಂಘಚ್ಛಧ್ವಂ ಸಂ ವೋ ಮನಾಂಸಿ ಜಾನತಾಮ್"
ಮಾನವರೇ ನೀವೆಲ್ಲರೂ ಸಹಭಾಳ್ವೆಯಿಂದಿರಬೇಕು ಪರಸ್ಪರ ಸಹಕಾರದಿಂದ ಬದುಕ ಬೇಕು. ಎಲ್ಲರೂ ಪರಸ್ಪರ ಸ್ನೇಹದಿಂದ ಬಾಳಬೇಕು ಸಮಾನ ಧ್ಯೇಯಕ್ಕಾಗಿ ದುಡಿಯಬೇಕು. ಇದೇ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಆಧಾರವಾಗಿರುವ ತತ್ವ. ಆದುದರಿಂದ ಪರಸ್ಪರ ಸಹಕಾರದಿಂದ ಸ್ವಾಭಿಮಾನದಿಂದ, ಜೀವನ ನಡೆಸಬೇಕು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ರಾಜ್ಯದಲ್ಲಿ ಉತ್ತಮ ಭವಿಷ್ಯವಿದೆ.




ಶ್ರೀ ಎಸ್.ಆರ್. ಸತೀಶಚಂದ್ರ
ಅಧ್ಯಕ್ಷರು



ಶ್ರೀ ಗುರುನಾಥ ಜ್ಯಾಂತಿಕರ
ಉಪಾಧ್ಯಕ್ಷರು

ರಾಜ್ಯದ ಎಲ್ಲ
ಸೌಹಾರ್ದ ಸಹಕಾರಿಗಳಿಗೆ
ನೂತನ ವರ್ಷದ,
ಸಂಕ್ರಾಂತಿಯ
ಹಾಗೂ
ಗಣರಾಜ್ಯೋತ್ಸವ
ಶುಭಾಶಯಗಳು.

– ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ.



# ದಶಕದ ಸಾಧನೆ ತೃಪ್ತಿಕರ. ಸಾಧಿಸಬೇಕಾದ್ದು ಸಾಕಷ್ಟಿದೆ...



## ಅಧ್ಯಕ್ಷರ ನುಡಿ....

ಈ ಕ್ಷೇತ್ರದಲ್ಲಿ ಸಾಧಿಸಬೇಕಾದ್ದು ಸಾಕಷ್ಟಿದೆ ಎಂದು ಸಹಕಾರಿಗಳು ಹಾಗೂ ಸರಕಾರದ ಅಪೇಕ್ಷೆಯಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಜಾರಿಗೊಳಿಸುವ ಪೂರ್ವದಲ್ಲಿ ರಾಜ್ಯದ ಹಿರಿಯ ಸಹಕಾರಿ ಮುಖಂಡರು ಅಪೇಕ್ಷಿಸಿದಂತೆ ಸಹಕಾರಿಗಳಿಗೆ ಸ್ವಾಯತ್ತತೆಯನ್ನು ನೀಡಲಾಗಿದೆ. ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣಕ್ಕೆ ಅವಕಾಶ ಕಲ್ಪಿಸಲಾಗಿದೆ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ನೂತನ ವರ್ಷ 2011ರ, ಮಕರ ಸಂಕ್ರಾಂತಿಯ ಹಾಗೂ 62ನೇ ಗಣರಾಜ್ಯೋತ್ಸವ ಶುಭಾಶಯಗಳು. ನೂತನ ವರ್ಷ ತಮಗೆ ಹಾಗೂ ತಮ್ಮ ಕುಟುಂಬ ವರ್ಗಕ್ಕೆ ಸುಖ ಶಾಂತಿ ನೆಮ್ಮದಿಯನ್ನು ತರಲಿ, ಸೌಹಾರ್ದ ಸಹಕಾರಿಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ತಮಗೆ ಅಧಿಕ ಶಕ್ತಿಯನ್ನು ದಯಪಾಲಿಸಲಿ, ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಲಿ ಎಂದು ಹಾರೈಸುತ್ತೇನೆ.

ರಾಜ್ಯದ ಸೌಹಾರ್ದ ಸಹಕಾರ ಚಳುವಳಿಗೆ 10 ವರ್ಷಗಳು ತುಂಬಿವೆ. ದಶಮಾನೋತ್ಸವ ಕಾರ್ಯಕ್ರಮಗಳು ನಡೆದಿವೆ. ರಾಜ್ಯಾದ್ಯಂತ ಎಲ್ಲ ಸೌಹಾರ್ದ ಸಹಕಾರಿಗಳು ಜನವರಿ 1 ರಂದು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಿವೆ. ದಶಕದ ಸಾಧನೆ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಸಮೀಕ್ಷೆ ಹಾಗೂ ಅವಲೋಕನಾ ಸಭೆಗಳು ಪರಿಣಾಮಕಾರಿಯಾಗಿ ನಡೆದಿವೆ. ಸಹಕಾರಿಗಳು ಉತ್ಸುಕತೆಯಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ರಾಜ್ಯದ್ಯಂತ ಸೌಹಾರ್ದ ಸಹಕಾರಿಯ ಅಲೆ ಕಾರ್ಯನಿರ್ವಹಿಸುತ್ತಿದೆ. ಪರಿಣಾಮವಾಗಿ ಹೆಚ್ಚಿನ ಸೌಹಾರ್ದ ಸಹಕಾರಿಗಳ ನೊಂದಣೆಯನ್ನು ನೀರಿಕ್ಷಿಸಲಾಗುತ್ತಿದೆ. ಇದು ಆರೋಗ್ಯಕರ ಬೆಳವಣಿಗೆ ಎನ್ನಬಹುದಾಗಿದೆ.

ರಾಜ್ಯದಲ್ಲಿ ಡಿಸೆಂಬರ್ ಅಂತ್ಯದವರೆಗೆ 1532 ಸೌಹಾರ್ದ ಸಹಕಾರಿಗಳು ನೋಂದಣೆಯಾಗಿ ಕಾರ್ಯನಿರ್ವಹಿಸುತ್ತಿವೆ. 230 ಕೋಟಿ ರೂಗಳ ಶೇರು ಬಂಡವಾಳ, 3575 ಕೋಟಿ ರೂಗಳ ಠೇವಣಿ, 2550 ಕೋಟಿ ರೂಗಳ ಸಾಲ, 550 ಕೋಟಿ ರೂಗಳ ನಿಧಿಗಳು 3850 ಕೋಟಿ ರೂಗಳ ದುಡಿಯುವ ಬಂಡವಾಳ, 75 ಕೋಟಿ ರೂಗಳ ಲಾಭ 15,500 ಜನರಿಗೆ ನೇರ ಉದ್ಯೋಗ ಪಿಗ್ಮಿ ಮತ್ತು ಇತರೆ ಚಟುವಟಿಕೆಗಳ ಮುಖಾಂತರ 12000 ಜನರಿಗೆ ಉದ್ಯೋಗ, 319 ಇ-ಸ್ಟಾಂಪಿಂಗ ಕೇಂದ್ರಗಳ ಕಾರ್ಯಾಚರಣೆ ಇವೆಲ್ಲವುಗಳು ಈ ಕ್ಷೇತ್ರದ ಉತ್ತಮ ಸಾಧನೆಯೆಂದು ಹೆಮ್ಮೆಯಿಂದ ಹೇಳಬಹುದಾಗಿದೆ. ರಾಜ್ಯದ ಸಹಕಾರಿಗಳ, ಸಾರ್ವಜನಿಕರ ಹಾಗೂ ಸರಕಾರದ ಗಮನಸೆಳೆಯುವಲ್ಲಿ ಈ ಕ್ಷೇತ್ರದ ಸಾಧನೆ ತೃಪ್ತಿಕರವಾಗಿದೆ.

ಈ ಕ್ಷೇತ್ರದಲ್ಲಿ ಸಾಧಿಸಬೇಕಾದ್ದು ಸಾಕಷ್ಟಿದೆ ಎಂದು ಸಹಕಾರಿಗಳು ಹಾಗೂ ಸರಕಾರದ ಅಪೇಕ್ಷೆಯಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಜಾರಿಗೊಳಿಸುವ ಪೂರ್ವದಲ್ಲಿ ರಾಜ್ಯದ ಹಿರಿಯ ಸಹಕಾರಿ ಮುಖಂಡರು ಅಪೇಕ್ಷಿಸಿದಂತೆ ಸಹಕಾರಿಗಳಿಗೆ ಸ್ವಾಯತ್ತತೆಯನ್ನು ನೀಡಲಾಗಿದೆ. ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಸರಕಾರದ ಹಸ್ತಕ್ಷೇಪವನ್ನು ಕನಿಷ್ಟ ಮಟ್ಟಕ್ಕೆ ಇಳಿಸಲಾಗಿದೆ. ಹೀಗಾಗಿ ದಶಕದ ಅವಧಿಯಲ್ಲಿ ಸೌಹಾರ್ದ ಸಹಕಾರ ಸಂಖ್ಯೆಯಲ್ಲಿ ಹೆಚ್ಚಳವಾಗುವುದರ ಜೊತೆಗೆ ಈ ಕ್ಷೇತ್ರದ ಸಾಧನೆ ಸಾರ್ವಜನಿಕರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಮೇಲೆ ಹೆಚ್ಚು ಕೇಂದ್ರೀಕೃತವಾಗಬೇಕಿತ್ತು ಎಂದು ಅಭಿಪ್ರಾಯಪಡಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ನಮ್ಮ ಕಾರ್ಯಚಟುವಟಿಕೆಗಳ ಪ್ರಮಾಣ ಹಾಗೂ ವ್ಯಾಪ್ತಿ ಹೆಚ್ಚಳವಾಗುವಂತೆ ಕಾರ್ಯಕ್ರಮಗಳನ್ನು ತಾವು ಹಮ್ಮಿಕೊಳ್ಳಬೇಕಿದೆ. ಸದಸ್ಯರಿಗೆ ಗ್ರಾಹಕರಿಗೆ ಅನುಕೂಲವಾಗುವಂತಹ ಹಾಗೂ ಅಗತ್ಯವೆನಿಸಬಹುದಾದ ಎಲ್ಲ ವಿಧವಾದ ಸೌಕರ್ಯಗಳನ್ನು ಸಹಕಾರಿಯಲ್ಲಿ ಅಳವಡಿಸಿಕೊಳ್ಳಬೇಕಿದೆ. ಸಹಕಾರಿ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂಬ ಅಭಿಪ್ರಾಯ ಹೊರಹೊಮ್ಮಬೇಕು. ಇದೊಂದು ಮಾದರಿ ಹಾಗೂ ಅನುಕರಣೀಯ ಕ್ಷೇತ್ರವಾಗಿ ಕಾರ್ಯನಿರ್ವಹಿಸಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಈ ನಿಟ್ಟನಲ್ಲಿ ಈ ನೂತನ ವರ್ಷದಲ್ಲಿ ತಾವೆಲ್ಲ ಕಾರ್ಯನಿರ್ವಹಿಸುತ್ತೀರೆಂದು ಅಪೇಕ್ಷಿಸಬಹುದಲ್ಲವೆ.

**ಎಸ್. ಆರ್. ಸತೀಶಚಂದ್ರ.**
ಅಧ್ಯಕ್ಷರು

# ಬೆಂಗಳೂರಿನಲ್ಲಿ ಪುತ್ತೂರಿನ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನೂತನ ಶಾಖೆ ಉದ್ಘಾಟನೆ

ಕರಾವಳಿಯಲ್ಲಿನ ಇಲ್ಲಿನ ದರ್ಬೆಯಲ್ಲಿ ಪ್ರಧಾನ ಕಛೇರಿ ಹೊಂದಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 7ನೇ ಶಾಖೆಯು ನಂ–32 ಶ್ರೀ ಸ್ಕಂದ ಶೀರೂರು ಪಾರ್ಕ್ ರಸ್ತೆ ಶೇಷಾದ್ರಿಪುರಂ ಬೆಂಗಳೂರು ಇಲ್ಲಿ ದಿನಾಂಕ 14–10–2010ರಂದು ಶುಭಾರಂಭಗೊಂಡಿತು. ನೂತನ ಶಾಖೆಯನ್ನು ರಾಜ್ಯದ ಇಂಧನ ಸಚಿವೆ ಕು॥ ಶೋಭಾ ಕರಂದ್ಲಾಜೆಯವರು ಉದ್ಘಾಟಿಸಿ ಶುಭ ಹಾರೈಸಿದರು.

ನಂತರ ಅವರು ಮಾತನಾಡುತ್ತಾ ಕರಾವಳಿ ಪ್ರದೇಶದ ಸಹಕಾರಿಯೊಂದು ರಾಜಧಾನಿಯಲ್ಲಿ ಶಾಖೆಯನ್ನು ತೆರೆದಿರುವುದು ನಮಗೆ ಹೆಮ್ಮೆ ತಂದಿದೆ ಎಂದರು. ಈ ಸಂದರ್ಭದಲ್ಲಿ ಇ–ಸ್ಟಾಂಪಿಂಗ್ ಸೇವೆ ಹಾಗೂ ಗಣಕೀಕರಣವನ್ನು ಬೆಂಗಳೂರು ಗಾಂಧಿನಗರ ಕ್ಷೇತ್ರದ ಶ್ರೀ ದಿನೇಶ್ ಗುಂಡೂರಾವ್‌ರವರು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಸಹಕಾರಿ ರತ್ನ ಪುರಸ್ಕೃತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್, ಕೆನರಾ ಬ್ಯಾಂಕ್ ಜನರಲ್ ಮ್ಯಾನೇಜರ್ ಶ್ರೀ ಆರ್.ಕೆ. ನಾಯಕ್, ಬಿ.ಬಿ.ಎಂ.ಪಿ. ಸದಸ್ಯರಾದ ಶ್ರೀ ನಟರಾಜ್ ಎನ್. ಉದ್ಯಮಿ ಶ್ರೀ ಗೋಪಿನಾಥ ಪ್ರಭು, ಶ್ರೀ ಕೃಷ್ಣ ರೆಡ್ಡಿ, ಶ್ರೀ ಮಲ್ಲಿಕಾರ್ಜುನ ರೆಡ್ಡಿ, ಶ್ರೀ ಅಣ್ಣಾ ಸಾಹೇಬ್ ಜೊಲ್ಲೆ ಹಾಗೂ ಶ್ರೀಮತಿ ಕಸ್ತೂರಿ ಕೆ.ಬಿ. ರಾವ್‌ರವರು ಆಗಮಿಸಿದ್ದರು.

ಸಭೆಯ ಅಧ್ಯಕ್ಷತೆಯನ್ನು ವಿಧಾನ ಪರಿಷತ್



ಪುತ್ತೂರಿನ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 7ನೇ ಶಾಖೆ ಬೆಂಗಳೂರಿನಲ್ಲಿ ಇಂಧನ ಸಚಿವೆ ಶೋಭಾ ಕರಂದ್ಲಾಜೆಯವರಿಂದ ಉದ್ಘಾಟನೆ.

ಮಾಜಿ ಸದಸ್ಯರಾಜ ಶ್ರೀ ಅಣ್ಣಾ ವಿನಯಚಂದ್ರರವರು ವಹಿಸಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರರವರು ಸ್ವಾಗತಿಸಿ ಪ್ರಸ್ತಾವನೆಗೈದರು. ಸಹಕಾರಿಯ ನಿರ್ದೇಶಕರಾದ ಶ್ರೀ ವಿನಯಕುಮಾರ್ ಕಂದಡ್ಕರವರು ಕಾರ್ಯಕ್ರಮ ನಿರ್ವಹಿಸಿದರು. ಸಹಕಾರಿಯ ಪ್ರಧಾನ ವ್ಯವಸ್ಥಾಪಕ ಶ್ರೀ ವಸಂತ ರವರು ವಂದಿಸಿದರು. ಕರ್ನಾಟಕ ಕರಾವಳಿಯಲ್ಲಿ 2001ರಲ್ಲಿ ಶುಭಾರಂಭಗೊಂಡು, ಬೆಂಗಳೂರು ನಗರದಲ್ಲಿ ಶಾಖೆಯನ್ನು ಪ್ರಾರಂಭಿಸಿದ ಪ್ರಥಮ ಸಹಕಾರಿಯಾಗಿದ್ದು, ಸಹಕಾರಿಯು ಠೇವಣಾತಿ, ವಿವಿಧ ಸಾಲ ಸೌಲಭ್ಯ, ಇ–ಸ್ಟಾಂಪಿಂಗ್, ವೆಸ್ಟರ್ನ್ ಯೂನಿಯನ್ ಮನಿ ಟ್ರಾನ್ಸ್‌ಫರ್, ಶೇರು ವ್ಯವಹಾರ, ಡಿ–ಮ್ಯಾಟ್ ಖಾತೆ, ಮಲ್ಟಿಸಿಟಿ ಚೆಕ್, ಸಾಮಾನ್ಯ ಹಾಗೂ ಜೀವ ವಿಮಾ ಸೌಲಭ್ಯ ಮುಂತಾದ ಸೇವೆಗಳನ್ನು ನೀಡುತ್ತಿದೆ.

## ನಿಬಂಧಕರ ಪತ್ರ

ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ ನಿ.ಬೆಂಗಳೂರು ಇದರ ಸದಸ್ಯತ್ವಕ್ಕೆ ಸಂಬಂದಿಸಿದಂತೆ ರಾಜ್ಯದ ಸಹಕಾರಿಗಳ ನಿಬಂಧಕರು, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ ಓಟಿಎಸ್–1/181/ಹೆಚ್‌ಓಟಿ/2010–11 ದಿನಾಂಕ 10–12–2010 ರಂದು ರಾಜ್ಯದ ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆದು ರಾಜ್ಯದ ಎಲ್ಲ ಅಪೆಕ್ಸ ಸಹಕಾರ ಸಂಸ್ಥೆಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಹಾಲು ಒಕ್ಕೂಟಗಳು, ಜಿಲ್ಲಾ ಯೂನಿಯನ್ನಗಳು, ಮಾಧ್ಯಮಿಕ ಮತ್ತು ಪ್ರಾಥಮಿಕ ಸಹಕಾರ ಸಂಘಗಳು ಅಂದರೆ ಎಲ್ಲ ವಿಧವಾದ ಸಹಕಾರ ಸಂಘಗಳಿಗೂ ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ ನಿ. ಬೆಂಗಳೂರು ಇದರ ಸದಸ್ಯತ್ವ ಪಡೆಯಲು ಅವಕಾಶವಿದೆ ಆದ್ದರಿಂದ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳಿಗೂ ಈ ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ ನಿ.ಬೆಂಗಳೂರು ಇದರ ಸದಸ್ಯತ್ವವನ್ನು ಪಡೆಯಲು ಸೂಚನೆ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ ಎಂಬ ವಿಷಯವನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

## ಇ–ಸ್ಟಾಂಪಿಂಗ ಪ್ರಗತಿ ಹಾಗೂ ಕೇಂದ್ರಗಳ ಸ್ಥಾಪನೆ ಬಗ್ಗೆ

ರಾಜ್ಯದಲ್ಲಿ ಇದುವರೆಗೆ 319 ಕೇಂದ್ರಗಳ ಮೂಲಕ ಸೌಹಾರ್ದ ಸಹಕಾರಿಗಳು ಇ–ಸ್ಟಾಂಪಿಂಗ ಸೇವೆಯನ್ನು ಒದಗಿಸಲಾಗುತ್ತಿದೆ. ರಾಜ್ಯದ ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಇ–ಸ್ಟಾಂಪಿಂಗ ಸೇವೆಯನ್ನು ಪ್ರಾರಂಭಿಸಲು ಅವಕಾಶವಿದೆ. ಆಸಕ್ತ ಸೌಹಾರ್ದ ಸಹಕಾರಿಗಳು ಈ ಬಗ್ಗೆ ಸಂಯುಕ್ತ ಸಹಕಾರಿಯಲ್ಲಿ ವಿಚಾರಿಸಿ ಮುಂದಿನ ಕ್ರಮವಿಡಬಹುದಾಗಿದೆ.

## RBI ಮತ್ತು NABARD ತಂಡದಿಂದ ಪುತ್ತೂರಿನ ಶ್ರೀ ಸರಸ್ವತಿ ಕ್ರೆಡಿಟ್ ಹಾಗೂ ಸಾಗರದ ಕೃಷಿಕ ಸೌಹಾರ್ದ ಸಹಕಾರಿ ಸಂಘಗಳ ಅಧ್ಯಯನ.

ಸಹಕಾರಿ ರಂಗದ ಸೌಹಾರ್ದ ಸಹಕಾರಿಗಳ ಮುಖಾಂತರ ಸೌಲಭ್ಯಗಳನ್ನು ನೀಡಲು ದೇಶದಾದ್ಯಂತ ನಡೆಯುತ್ತಿರುವ ಸಮೀಕ್ಷೆ ಮತ್ತು ಆರ್ಥಿಕ ಒಳಪಡಿಸುವಿಕೆಯಲ್ಲಿ ಸಹಕಾರಿಗಳು ನಿರ್ವಹಿಸುತ್ತಿರುವ ಪಾತ್ರದ ಕುರಿತು ಪುತ್ತೂರು ಕೇಂದ್ರ ಕಛೇರಿ ಹೊಂದಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಇದರೊಂದಿಗೆ ವಿಚಾರ ವಿನಿಮಯವು ದಿನಾಂಕ–7 ಹಾಗೂ 8 ರಂದು RBI ಹಾಗೂ NABARD ತಂಡದಿಂದ ನಡೆಯಿತು.

ಈ ತಂಡವು ಆರ್.ಬಿ.ಐ ಬೆಂಗಳೂರು ಕಚೇರಿಯ ಶ್ರೀ ಶಕೀಲ್ ಹಸನ್ ಹಿರಿಯ ವ್ಯವಸ್ಥಾಪಕರು, ಶ್ರೀ ಟಿ.ಕೆ.ರಘು ವ್ಯವಸ್ಥಾಪಕರು ಹಾಗೂ NABARD ಮಂಗಳೂರಿನ ಶ್ರೀ ಪ್ರಸಾದ ರಾವ್ ಹಾಗೂ ಶ್ರೀಮತಿ ಲತಾರಾವ್ ಅಧಿಕಾರಿಯವರನ್ನು ಒಳಗೊಂಡಿತ್ತು.

ಪ್ರಸ್ತುತ ಸಮೀಕ್ಷೆಯು ಕರ್ನಾಟಕದಲ್ಲಿ ಆಯ್ದ 20 ಸೌಹಾರ್ದ ಸಹಕಾರಿಯಲ್ಲಿ ನಡೆಯುತ್ತಿದ್ದು ದ.ಕ ದಲ್ಲಿ ಆಯ್ಕೆಯಾದ ಏಕೈಕ ಸಹಕಾರಿಯಾಗಿದ್ದು, RBI ತಂಡ ಡಿಸೆಂಬರ್ ಒಳಗಾಗಿ ಎಲ್ಲಾ ಆಯ್ದ ಸಹಕಾರಿಗಳ ಸಮೀಕ್ಷೆಯನ್ನು ನಡೆಸಿ ಸೌಹಾರ್ದ ಸಹಕಾರಿಗಳಿಗೆ ಇನ್ನು ಹೆಚ್ಚಿನ ಸೌಲಭ್ಯ, ಸೌಕರ್ಯಗಳನ್ನು ನೀಡುವ ಕುರಿತು ಸೂಕ್ತ ಶಿಫಾರಸ್ಸುಗಳನ್ನು RBI ತಂಡ ಕೇಂದ್ರದಕ್ಕೆ ನೀಡಲಿರುತ್ತದೆ.ಸರಸ್ವತಿ ಕ್ರೆಡಿಟ್ಗೆ ಭೇಟಿ ನೀಡಿದ ತಂಡವು ಸಹಕಾರಿಯ ಸದಸ್ಯರನ್ನು, ಗ್ರಾಹಕರನ್ನು, ಭೇಟಿಮಾಡಿ ಅವಶ್ಯ ಮಾಹಿತಿಯನ್ನು ಸಂಗ್ರಹಿಸಿರುತ್ತಾರೆ. ಹಾಗೆಯೇ ಪಾಣಾಜೆಯಲ್ಲಿ ಕೃಷಿಕರಿಗೆ ಸೌಹಾರ್ದ ಸಹಕಾರಿಯಿಂದ ದೊರೆಯುತ್ತಿರುವ ಸೌಲಭ್ಯದ ಕುರಿತು, ಸಹಕಾರಿ ಬ್ಯಾಂಕುಗಳ ಕಾರ್ಯನಿರ್ವಹಣೆಯ ಬಗ್ಗೆ ಸಾರ್ವಜನಿಕ ಸಂವಾದ ಕಾರ್ಯಕ್ರಮವನ್ನು ನಡೆಸಿರುತ್ತಾರೆ.

**ಸರಸ್ವತಿ ಕ್ರೆಡಿಟ್‌ನಿಂದ RBI ಮುಂದೆ ವಿನಂತಿಗಳು:** ಕ್ರೆಡಿಟ್ ಸಹಕಾರಿಗಳಿಗೂ ಠೇವಣಾತಿ ವಿಮೆ ಗ್ಯಾರಂಟಿ, ಚೆಕ್ ಮುದ್ರಿಸುವ ಅಧಿಕಾರ, NABARD ನಿಂದ refinance, ಸಹಕಾರಿಗಳ ಮೂಲಕ ಚೆಕ್ ಕ್ಲಿಯರಿಂಗ್ ವ್ಯವಸ್ಥೆ, ಥರ್ಡ್ ಪಾರ್ಟಿ ಚೆಕ್ ರೂ.50000/–ದ ಮಿತಿಯನ್ನು ರದ್ದುಗೊಳಿಸುವುದು ಮುಂತಾದ ಬೇಡಿಕೆಯನ್ನು ಮಂಡಿಸಿದೆ.

ಸಹಕಾರಿಗಳ ಭೇಟಿ ನೀಡಿದ ಮತ್ತು ತಂಡದ ಶ್ರೀ ಶಕೀಲ್ ಹಸನ್, ಹಾಗೂ ಶ್ರೀ ಟಿ.ಕೆ.ರಘು, ಅವರು ಸಹಕಾರಿಯ ಕಾರ್ಯವೈಖರಿ ಹಾಗೂ ನೀಡುತ್ತಿರುವ ವಿವಿಧ ಸೇವೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು, ಮುಂದಿನ ದಿನಗಳಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ರಾಜ್ಯದ ಅತ್ಯುತ್ತಮ ಸಹಕಾರಿಯಾಗಲಿ ಎಂದು ಹಾರೈಸಿರುತ್ತಾರೆ. ಅಲ್ಲದೆ ರಾಜ್ಯ ಮಟ್ಟದಿಂದ ಕೇಂದ್ರ ಸಮೀಕ್ಷಾ ತಂಡದ ಸಮೀಕ್ಷೆಗೆ ಸರಸ್ವತಿ ಕ್ರಡಿಟ್‌ನ್ನು ಆಯ್ಕೆ ಮಾಡುವುದಾಗಿ ತಿಳಿಸಿರುತ್ತಾರೆ.

ಸಮೀಕ್ಷಾ ಸಮಯದಲ್ಲಿ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್ಚಂದ್ರ, ಉಪಾಧ್ಯಕ್ಷ ಶ್ರೀ ಪದ್ಮನಾಭ ಬೋರ್ಕರ್, ಶ್ರೀ ಸುನಿಲ್ ಬೋರ್ಕರ್, ಶ್ರೀ ರಮೇಶ್ ಪ್ರಭು, ಶ್ರೀ ಸೂರ್ಯನಾರಾಯಣ ನಾಯಕ್, ಶ್ರೀ ಅನಂತಕೃಷ್ಣ ನಾಯಕ್, ಹಾಗೂ ಸಲಹೆಗಾರರಾದ ಶ್ರೀ ಎಸ್.ರಾಧಾಕೃಷ್ಣ ನಾಯಕ್, ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ.ಎ ಉಪಸ್ಥಿತರಿದ್ದರು.

# ಒತ್ತಡ ನಿರ್ವಹಣೆ : ಭಾಗ–4 ಇಂದು ಏನಾಗಿದೆ?

ಇಂದು...

* ಪಟ್ಟಣದ ಪ್ರತಿ ನೂರು ಜನರಲ್ಲಿ 80 ಜನರಿಗೆ ಶೇ.80ಕ್ಕಿಂತಲೂ ಹೆಚ್ಚು ಒತ್ತಡವಿದೆ.
* ಶೇ. 40 ರಷ್ಟು ಜನರಿಗೆ ಸರಿಯಾಗಿ ನಿದ್ರೆ ಬರುವುದಿಲ್ಲ. ನಿದ್ರೆಗುಳಿಗೆ ಗಳ ಬಳಕೆ ಜಾಸ್ತಿಯಾಗುತ್ತದೆ.
* ಶೇ. 44ರಷ್ಟು ಮಂದಿಗೆ ಕಣ್ಣು ನೋವು.
* ನಾಲ್ಕು ವರ್ಷದ ಮಗು ಸ್ವತಂತ್ರವಾಗಿಲ್ಲ. 6 ರಿಂದ 10 ಪುಸ್ತಕಗಳನ್ನು ಓದಬೇಕಿದೆ.
* Competition ಮತ್ತು Comparison ವಾತಾವರಣದಲ್ಲಿ ಮಕ್ಕಳು ಬದುಕಬೇಕಾಗಿದೆ.
* ಗರ್ಭದಲ್ಲಿರುವ ಶಿಶುವು ಕೂಡಾ ಒತ್ತಡಕ್ಕೆ ಒಳಗಾಗಿದೆ.
* 20 ವರ್ಷಗಳ ಹಿಂದೆ ಒಬ್ಬರೋ, ಇಬ್ಬರೋ ಮುಂಬೈಗೆ ಹೋಗಿ ಬೈಪಾಸ್ ಸರ್ಜರಿ ಮಾಡಿಸಿಕೊಳ್ಳುತ್ತಿದ್ದರು.
  ಇಂದು ದಿನಕ್ಕೆ ನೂರಾರು ಜನ ನಮ್ಮ ರಾಜ್ಯದಲ್ಲಿಯೇ ಆಪರೇಷನ್ ಮಾಡಿಸಿಕೊಳ್ಳುತ್ತಿದ್ದಾರೆ.
* ಪಟ್ಟಣಿಗರನ್ನೇ ಪೀಡಿಸುತ್ತಿದ್ದ ಹೃದಯಾಘಾತ ಈಗ ಗ್ರಾಮೀಣ ಜನತೆಯನ್ನು ಬೆನ್ನು ಹತ್ತಿದೆ.
* ಭಾರತದಲ್ಲಿ ಈಗ ಪ್ರತಿ ಹತ್ತು ಸಾವಿರ ಜನರಲ್ಲಿ 8 ಜನ ನಗರವಾಸಿ, 4 ಜನ ಗ್ರಾಮವಾಸಿಗಳು ಹೃದಯಾಘಾತಕ್ಕೆ ಬಲಿಯಾಗುತ್ತಿದ್ದಾರೆ.
* ಭಾರತದಲ್ಲಿ ಪ್ರತಿ ವರ್ಷ 30 ದಶಲಕ್ಷ ಜನರಿಗೆ ಹೃದಯಾಘಾತ ಉಂಟಾಗುವ ಅಪಾಯವಿದೆಯೆಂದು ಸಂಶೋಧನೆಗಳು ಹೇಳುತ್ತಿವೆ.
* 1980ರವರೆಗೆ ಹೆಸರೇ ಇಲ್ಲದ ವೃದ್ಧಾಶ್ರಮಗಳ ಸಂಖ್ಯೆ ಜಾಸ್ತಿಯಾಗುತ್ತಿದೆ.
* 20 ವರ್ಷಗಳ ಹಿಂದೆ ಯೋಗ–ಮೆಡಿಟೇಷನ್ ಬಗ್ಗೆ ಹೆಚ್ಚಿನ ಜನರಿಗೆ ತಿಳಿದೇ ಇರಲಿಲ್ಲ. ಇಂದು ಮನೆಗಳಲ್ಲಿ.. ಕೆಲಸ ಮಾಡುವ ಸ್ಥಳಗಳಲ್ಲಿ...ಶಾಲಾ–ಕಾಲೇಜುಗಳಲ್ಲಿ...ವ್ಯಕ್ತಿ ವಿಕಸನ ಶಿಬಿರಗಳಲ್ಲಿ ಯೋಗ–ಮೆಡಿಟೇಷನ್‌ಗೆ ಹೆಚ್ಚಿನ ಪ್ರಾಧ್ಯಾನ್ಯತೆ ದೊರೆತಿದೆ.

**ಪ್ರಪಂಚದಲ್ಲಿ...**

* ಪ್ರತಿ ದಿನ 2,80,000ಜನ ಒತ್ತಡದ ಕಾಯಿಲೆಗಳಿಂದಾಗಿ ಕೆಲಸಕ್ಕೆ ಗೈರು ಹಾಜರಾಗುತ್ತಿದ್ದಾರೆ.
* ಪ್ರತಿ ವರ್ಷ 62 ಮಿಲಿಯನ್ ಜನರು ಸ್ಟ್ರೋಕ್‌ಗೆ ಒಳಗಾಗುತ್ತಿದ್ದಾರೆ.
* ಪ್ರತಿ ವರ್ಷ 91 ಮಿಲಿಯನ್ ಜನರು ಮಾನಸಿಕ ಕಾಯಿಲೆಗಳಿಗೆ ಗುರಿಯಾಗುತ್ತಿದ್ದಾರೆ.
* ಮುಂಬರುವ ದಿನಗಳಲ್ಲಿ ಒತ್ತಡದ ಕಾಯಿಲೆಗಳಿಂದಾಗಿ ಮರಣಗಳ ಸಂಖ್ಯೆ ಜಾಸ್ತಿಯಾಗುತ್ತದೆ.
* ಒಂದು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಎಷ್ಟು ಒತ್ತಡವಿರುತ್ತದೋ, ಅಷ್ಟೇ ಒತ್ತಡ ಮಹಿಳೆಯರಿಗೂ ಇದೆ.

...ಮೇಲಿನ ವಿವರಗಳು ಕೇವಲ ಉದಾಹರಣೆಯಷ್ಟೆ. ಇನ್ನೂ ಹತ್ತು–ಹಲವು ಪ್ರತಿಕೂಲ ಪರಿಸ್ಥಿತಿಗಳನ್ನು ಮೆಜಾರಿಟಿ ಜನರ ದೈನಂದಿನ ಜೀವನದಲ್ಲಿ ಕಾಣಬಹುದಾಗಿದೆ.

21ನೇ ಶತಮಾನವನ್ನು "ಓಡುವ ಯುಗ" ಎಂದು ಕರೆಯಲಾಗಿದೆ. ಇದರಿಂದಾಗಿ ಬಹಳ ಸಂಕೀರ್ಣವಾದ ಬದುಕನ್ನು ನಾವು ರೂಪಿಸಿಕೊಂಡಿಸಿದ್ದೇವೆ. ಬಿಡುವಿಲ್ಲದ ನಮ್ಮ ಯಾಂತ್ರಿಕ ಬದುಕಿನಲ್ಲಿ ನಮ್ಮನ್ನು ಕಾಡುವ ಹಲವಾರು ನ್ಯೂನತೆಗಳು, ಭಯಗಳು, ಎದುರಿಸಬೇಕಾದ ಸ್ಪರ್ಧೆಗಳು, ಆರ್ಥಿಕ ಸಂಕಷ್ಟ, ಕೌಟುಂಬಿಕ ಸಮಸ್ಯೆಗಳು, ಅನುಭವಿಸುವ ಅತೃಪ್ತಿಗಳು.. ಇವೆಲ್ಲವೂ ನಮ್ಮ ಜೀವನವನ್ನು ಒತ್ತಡದ ಜೀವನವನ್ನಾಗಿ ಮಾಡಿವೆ.



ಶ್ರೀ ಬಿ. ಎ. ಮಹದೇವಪ್ಪ
ಜಂಟಿನಿಬಂಧಕರು

ಒತ್ತಡ ಒಬ್ಬ ವ್ಯಕ್ತಿಯ ಮನಸ್ಸು ಮತ್ತು ಶರೀರದ ಆರೋಗ್ಯಕ್ಕೆ ಸಂಬಂಧಿಸಿದೆ. ಆರೋಗ್ಯ ಎಂದರೆ "ಶರೀರದಲ್ಲಿನ ಎಲ್ಲ ವ್ಯವಸ್ಥೆಗಳು ಮಾನಸಿಕ ವ್ಯವಸ್ಥೆಯೊಂದಿಗೆ ಹೊಂದಿಕೊಂಡು ಕೆಲಸ ಮಾಡುವುದು ಎಂದರ್ಥ.

ಆರೋಗ್ಯ ಎಂದರೆ ದೇಹ ಬರೀ ಕಾಯಿಲೆಯಿಂದ ದೂರವಾಗುವುದು ಮಾತ್ರವಲ್ಲ. ಸಂಪೂರ್ಣವಾಗಿ...ಅಂದರೆ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕವಾಗಿ ಆರೋಗ್ಯವಾಗಿರುವುದು ಎಂದು ವಿಶ್ವ ಆರೋಗ್ಯ ಸಂಸ್ಥೆ (W.H.O.) ಆರೋಗ್ಯದ ಬಗ್ಗೆ ಹಿಂದೆ ಹೇಳಿದ್ದ ತನ್ನ ವ್ಯಾಖ್ಯಾನವನ್ನು ಬದಲಿಸಿ, ಮೇಲಿನಂತೆ ಹೇಳಿದೆ.

ಆರೋಗ್ಯದ ಬಗ್ಗೆ ಇದು ಹೊಸ ವ್ಯಾಖ್ಯಾನ. ಬಹುಶಃ ಇದಕ್ಕಿಂತಲೂ ಬೇರೆ ವ್ಯಾಖ್ಯಾನ ಬೇಕಿಲ್ಲ.

Cure the mind before curing the body

ಎನ್ನುವ ಮಾತು ಈಗ ಇಡೀ ಆರೋಗ್ಯ ಕ್ಷೇತ್ರದಲ್ಲಿ ಮನೆ ಮಾತಾಗಿದೆ. ಇತ್ತೀಚಿನ ದಿನಗಳಲ್ಲಿ ಯಾವುದೇ ರೋಗಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ವೈದ್ಯರು ಕೇವಲ ಅವನ ದೈಹಿಕ ರೋಗವನ್ನಷ್ಟೇ ಗಮನಿಸುತ್ತಿಲ್ಲ... ಜೊತೆಗೆ ಅವನ ಮಾನಸಿಕ ಸಮಸ್ಯೆಗಳನ್ನು ಸಹ ಅರ್ಥಮಾಡಿಕೊಂಡು ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಆರೋಗ್ಯವಂತ ದೇಹ ಆರೋಗ್ಯವಂತ ಮನಸ್ಸನ್ನು ಅವಲಂಬಿಸಿದೆ.

ಆತಂಕ, ನಿರಾಶೆ, ಭಯ, ಚಿಂತೆ, ಸೋಲು ದ್ವೇಷ, ಕೋಪ ಮುಂತಾದ ನಕಾರಾತ್ಮಕ ಅಂಶಗಳು ಮಾನಸಿಕ ಆರೋಗ್ಯಕ್ಕೆ ಅಡ್ಡಿಯನ್ನುಂಟು ಮಾಡಿ, ತನ್ಮೂಲಕ ದೈಹಿಕ ಆರೋಗ್ಯವನ್ನೂ ಕೆಡಿಸುತ್ತಿವೆ. ಹೃದಯ ರೋಗಗಳು, ರಕ್ತದೊತ್ತಡ, ಕೀಲು ನೋವು, ಜಠರದ ಹುಣ್ಣು, ಚರ್ಮರೋಗಗಳು, ಅಸ್ತಮಾ ಇವೇ ಮೊದಲಾದ ಬೇನೆಗಳಿಗೆ ಒತ್ತಡ ಪ್ರಮುಖ ಕಾರಣವೆಂದು ಆಧುನಿಕ ವೈದ್ಯಕೀಯ ಸಂಶೋಧಕರು ಹೇಳುತ್ತಿದ್ದಾರೆ.

ಒಬ್ಬ ವ್ಯಕ್ತಿಗೆ ಒತ್ತಡ ಉಂಟಾದಾಗ ಅವನಲ್ಲಿ ಮನೋ–ಶಾರೀರಿಕ ಬದಲಾವಣೆಗಳು ಹೇಗಾಗುತ್ತವೆ ಎಂಬುದನ್ನು ಈ ಕೆಳಗಿನ ಅಂಶಗಳಿಂದ ಸ್ಪಷ್ಟವಾಗಿ ತಿಳಿಯಬಹುದಾಗಿದೆ:–

ಒಬ್ಬ ವ್ಯಕ್ತಿ ಒಂದು ಸಮಸ್ಯೆಯನ್ನಾಗಲಿ...ಆಪತ್ತನ್ನಾಗಲೀ ಎದುರಿಸುವ ಪರಿಸ್ಥಿತಿ ಬಂದಾಗ...

* ಮೊದಲು ಆ ಘಟನೆಗೆ ಸಂಬಂಧಪಟ್ಟ ಮಾಹಿತಿ ಮೆದುಳಿಗೆ ತಲುಪುತ್ತದೆ.
* ಸಮಸ್ಯೆಯ ತೀವ್ರತೆಗೆ ಅನುಗುಣವಾಗಿ ನರವ್ಯವಸ್ಥೆ ಪ್ರಚೋದನೆಗೊಳ್ಳುತ್ತದೆ.
* ಆಗ ಮುಖ್ಯ ಹಾರ್ಮೋನುಗಳು ಕೂಡಲೇ ತಲ್ಲಣಗೊಳ್ಳುತ್ತವೆ.
* ಇದರಿಂದಾಗಿ ಜೀರ್ಣಾಂಗಗಳಿಗೆ ರಕ್ತ ಪೂರೈಕೆ ಕಡಿಮೆಯಾಗುತ್ತದೆ.
* ಅವುಗಳಿಗೆ ಅಧಿಕ ಆಮ್ಲಜನಕ ಬೇಕಾಗುತ್ತದೆ.
* ಇದಕ್ಕಾಗಿ ಹೃದಯ ಜಾಸ್ತಿ ರಕ್ತವನ್ನು ಪಂಪ್ ಮಾಡುತ್ತದೆ.
* ಆಗ ಹೃದಯದ ಬಡಿತ ಹೆಚ್ಚಾಗುತ್ತದೆ.
* ಹೃದಯದ ಬಡಿತ ಜಾಸ್ತಿಯಾದಂತೆ ಉಸಿರಾಟದಲ್ಲಿ ತೀವ್ರತೆ ಉಂಟಾಗುತ್ತದೆ.
* ಇದರಿಂದ ರಕ್ತದ ಒತ್ತಡ ಜಾಸ್ತಿಯಾಗುತ್ತದೆ.
* ಆಗ ಬೆವರು ಬರುವುದು–ಕೈಕಾಲುಗಳು ತಣ್ಣಗಾವುದು ಕಂಡು ಬರುತ್ತದೆ.

...ಇಂತಹ ಸನ್ನಿವೇಶ ಬಹಳ ಕಾಲ ಮುಂದುವರೆಯುವುದು ಒಳ್ಳೆಯದಲ್ಲ. ಆ ವ್ಯಕ್ತಿ ಎದುರಿಸುತ್ತಿರುವ ಸಮಸ್ಯೆ ಪರಿಹಾರವಾದರೆ...ಮತ್ತೆ ಸಹಜ ಸ್ಥಿತಿಗೆ ಆತನು ಬರಲು ಸಾಧ್ಯವಿದೆ. ಆದರೆ ಈ ಸನ್ನಿವೇಶ ಬಹಳ ಕಾಲ ಮುಂದುವರೆದರೆ ಹಾಗೂ ಆ ವ್ಯಕ್ತಿಯ ಮನಸ್ಸಿನಲ್ಲಿ ಆ ಸಮಸ್ಯೆಯ ಪರಿಣಾಮ ಉಳಿದು ಬಿಟ್ಟರೆ...ಮನೋ–ಶಾರೀರಿಕ ರೋಗಗಳು ತಲೆದೋರುತ್ತವೆ. "ನಾವು ಚೆನ್ನಾಗಿದ್ದೇವೆ...ಆರೋಗ್ಯವಾಗಿದ್ದೇವೆ...ಏನು ತೊಂದರೆ ಇಲ್ಲ" ಎಂದು ಯಾವುದೇ ಸಮಯ ಅಥವಾ ಯಾವುದೇ ಸ್ಥಳದಲ್ಲಿ ಹೇಳಿಕೊಳ್ಳುವಷ್ಟರಲ್ಲಿ, ಯಾವುದಾದರೊಂದು ಅನಾರೋಗ್ಯದ ಲಕ್ಷಣ ನಮ್ಮನ್ನು ಕಾಡುತ್ತದೆ. ಇದನ್ನೇ ಮನೋ–ಶಾರೀರಿಕ ಸಮಸ್ಯೆಗಳ ರೂಪದಲ್ಲಿ ನಾವು ಕಾಣುತ್ತೇವೆ.

ಅವುಗಳ ಒಂದು ಸಂಕ್ಷಿಪ್ತ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ. **12ನೇ ಪುಟಕ್ಕೆ...**

# ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆ



**ದಿನಾಂಕ 6/1/2011ರಂದು ರಾಜ್ಯದ ಸೌಹಾರ್ದ ಸಹಕಾರಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಶ್ರೀ ಆರ್.ಎಂ.ಮಂಜುನಾಥಗೌಡ ನೆರವೇರಿಸಿದರು. ಚಿತ್ರದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ ಚಂದ್ರ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣರೆಡ್ಡಿ, ಶ್ರೀ ಹೆಚ್.ವಿ.ರಾಜೀವ್, ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಸಹಕಾರಿ ನಿಬಂಧಕ ಶ್ರೀ ಹೆಚ್.ಜಿ.ಹೆಗಡೆ, ಜಂಟಿ ನಿಬಂಧಕ ಶ್ರೀ ಕೆ.ಎಸ್.ನವೀನ್, ಕ್ಯಾಸ್ಕಾರ್ಡ್ ಬ್ಯಾಂಕಿನ ಅಧ್ಯಕ್ಷ ಶ್ರೀ ಚೊಕ್ಕನಗೌಡರು ಮುಂತಾದವರಿದ್ದಾರೆ.**



**ದಿನಾಂಕ 7/1/2011ರಂದು ರಾಜ್ಯದ ಸೌಹಾರ್ದ ಸಹಕಾರಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಅಮೀತಾ ಪ್ರಸಾದ್ ನೆರವೇರಿಸಿದರು. ಚಿತ್ರದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣರೆಡ್ಡಿ, ಶ್ರೀ ವೆಂಕಟರೆಡ್ಡಿ, ಶ್ರೀ ಮನೋಹರ ಮಸ್ಕಿ, ವಿಧಾನ ಪರಿಷತ್ ಸದಸ್ಯರು, ನಿರ್ದೇಶಕರಾದ ಶ್ರೀ ಎನ್.ಶ್ರೀನಿವಾಸ್‌ಮೂರ್ತಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ್ ಮುಂತಾದವರು ಇದ್ದಾರೆ.**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯು ದಿನಾಂಕ 6, 7 ಜನವರಿ 2011 ರಂದು ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆಯಲ್ಲಿ ನಡೆಯಿತು.

ದಿನಾಂಕ 6–01–2011ರ ಸಭೆಯನ್ನು ಕರ್ನಾಟಕ ರಾಜ್ಯ ಸಹಕಾರಿ ಅಫೆಕ್ಸ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್. ಎಂ.ಮಂಜುನಾಥರವರು ಉದ್ಘಾಟಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿ ರಾಜ್ಯದ ಜನತೆಯ ಹಾಗೂ ಸರಕಾರದ ಪ್ರಶಂಸೆಗೆ ಪಾತ್ರವಾಗಿವೆ. ರಾಜ್ಯದ ಸಹಕಾರಿ ಸಂಘಗಳಲ್ಲಿ ಸಾಲ ನೀಡುವಿಕೆಯಲ್ಲಿ ಏಕರೂಪ ಬಡ್ಡಿ ವಿಧಿಸುವ ವ್ಯವಸ್ಥೆ ಜಾರಿಗೆ ಬರಬೇಕು, ಈ ಬಗ್ಗೆ ಚಿಂತನೆಯಾಗಬೆಕು ಎಂದು ತಿಳಿಸಿದರು.



**ಶ್ರೀ ಆರ್.ಎಂ.ಮಂಜುನಾಥಗೌಡ**

ಸಹಕಾರಿ ಸಂಘಗಳ ನಿಬಂಧಕರಾದ ಶ್ರೀ ಎಸ್.ಜಿ.ಹೆಗೆಡೆ ಐ.ಎ.ಎಸ್. ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹೆಚ್ಚಿನ ರೀತಿಯಲ್ಲಿ ಆಗಬೇಕು. ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಎಲ್ಲಾ ನೆರವು ನೀಡುತ್ತದೆ ಎಂದು ತಿಳಿಸಿದರು.

ದಿನಾಂಕ : 07–01–2011ರಂದು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಹಕಾರ ಚಳುವಳಿಯ ಇತಿಹಾಸದಲ್ಲಿ ಕರ್ನಾಟಕ ರಾಜ್ಯಕ್ಕೆ ಮಹತ್ವದ ಸ್ಥಾನವಿದೆ. ಮಹತ್ವದ ಕಾಣಿಕೆ ನೀಡಿದೆ, ಅಭಿವೃದ್ಧಿಯಲ್ಲಿ ಹೆಚ್ಚಿನ ಜವಾಬ್ದಾರಿಯುತವಾಗಿದೆ. ಸೌಹಾರ್ದ ಸಹಕಾರಿಗಳು ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಕಂಡಿದೆ. ಸಹಕಾರಿ ಕಾಯ್ದೆಗೆ ಅಗತ್ಯವಾಗಿರುವ ತಿದ್ದುಪಡಿಯನ್ನು ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಹಾಗೂ ಸಂಯುಕ್ತ ಸಹಕಾರಿಯ ಸ್ಥಾಪಕ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರ ಬೆಳವಣಿಗೆಗೆ ಸಾಧ್ಯವಾದಷ್ಟು ಯಾರ ಮೇಲೂ ಅವಲಂಬಿತವಾಗಬಾರದು, ಸ್ವಯಂ ಬೆಳವಣಿಗೆಗೆ ಅವಕಾಶಗಳನ್ನು ಹುಡುಕಬೇಕು. ಹೊಸ ಆ ಮಾಧ್ಯಮಗಳನ್ನು ಸೃಷ್ಟಿಸಿ ಬೆಳವಣಿಗೆಯಾಗಬೇಕು. ಅದರಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜವಾಬ್ದಾರಿ ಹೆಚ್ಚಿನದಾಗಿ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಸ್ವಾಗತಿಸಿದರು. ಶ್ರೀ ಗುರುನಾಥ ಜ್ಯಾಂತಿಕರ ಪ್ರಾಸ್ತಾವಿಕ ಭಾಷಣ ಮಾಡಿದರು. ಸಮಾರಂಭ ದಲ್ಲಿ ಕ.ರಾ.ಸ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಶ್ರೀ ಚಿಕ್ಕಬಸವನ ಗೌಡ, ಸಹಕಾರಿಗಳ ಅಪರ ನಿಬಂಧಕ ಹಾಗೂ ಕ್ಯಾಸ್ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಪಿ.ವೆಂಕಟರೆಡ್ಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಬಿ.ಹೆಚ್. ಕೃಷ್ಣರೆಡ್ಡಿ, ಶ್ರೀ ಎನ್.ಶ್ರೀನಿವಾಸಮೂರ್ತಿ, ಶ್ರೀ ಅಂಬ್ಲಿ ಮಂಜುನಾಥ, ಶ್ರೀಭಾಸ್ಕರ ಹೆಗಡೆ, ಶ್ರೀ ಹೆಚ್.ವಿ.ರಾಜೀವ, ಶ್ರೀ ಗೋಪಿಕೃಷ್ಣರಾವ್, ಶ್ರೀ ಮಂಜುನಾಥ ಸಿದ್ದಾಪೂರ ಮುಂತಾದ ಗಣ್ಯರು, ಜಂಟಿ ನಿಬಂಧಕ ಶ್ರೀ ಕೆ.ಎಸ್.ನವೀನರವರು ಭಾಗವಹಿಸಿದ್ದರು.



**ಶ್ರೀ ಎಸ್.ಜಿ. ಹೆಗಡೆ**

ದಿನಾಂಕ : 6/1/2011ರಂದು 225 ಸೌಹಾರ್ದ ಸಹಕಾರಿಗಳು 260 ಪ್ರತಿನಿಧಿಗಳು, ದಿನಾಂಕ : 7/1/2011ರಂದು 288 ಸೌಹಾರ್ದ ಸಹಕಾರಿಗಳ 325 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮಾರಂಭದಲ್ಲಿ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಗೆ ಸಿದ್ದತೆ ವಿಷಯಗಳ ಕರಿತು ಶ್ರೀ ರವೀಂದ್ರನಾಥ ಹಾಗೂ ಶ್ರೀ ಮಧುಕರ ಹೆಗಡೆಯವರು ಉಪನ್ಯಾಸ ನೀಡಿದರು.

ಡಾ.ನಂದೀಶ ಹಿರೇಮಠರವರು ಗ್ರಾಹಕ ಸಂಬಂಧಗಳ ನಿರ್ವಹಣೆ ವಿಷಯವಾಗಿ ಉಪನ್ಯಾಸ ನೀಡಿದರು.

**–ವಿ.ಜೆ.ಕಾರಕೂನ**
ತರಬೇತಿ ಅಧಿಕಾರಿ.

# ಚಿತ್ರದುರ್ಗ, ದಾವಣಗೆರೆ ಹಾಗೂ ಗದಗ ಜಿಲ್ಲೆಗಳಲ್ಲಿ ಅವಲೋಕನಾ ಸಭೆಗಳು



ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಭೆಯು ದಿನಾಂಕ 13–12–2010 ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ಚಿತ್ರದುರ್ಗ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಸಭಾಂಗಣದಲ್ಲಿ ನಡೆಯಿತು. ಸಭೆಯನ್ನು ಚಿತ್ರದುರ್ಗ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಎಸ್.ಆರ್.ಲಕ್ಷ್ಮಿಕಾಂತರೆಡ್ಡಿಯುವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷರು, ನಿರ್ದೇಶಕರು ಸೇರಿದಂತೆ ಜಿಲ್ಲೆಯ 13 ಸೌಹಾರ್ದ ಸಹಕಾರಿಗಳ 30 ಪ್ರತಿನಿಧಿಗಳು ಭಾಗವಹಿಸಿದ್ದರು

ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಭೆಯು ಹರಪನಹಳ್ಳಿ ತಾಲ್ಲೂಕ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ದಿನಾಂಕ 14–12–2010 ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ ಚಂದ್ರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಅಂಬ್ಲಿ ಮಂಜು ನಾಥರವರು ಉಪಸ್ಥಿತರಿದ್ದರು. ಜಿಲ್ಲೆಯ 11 ಸೌಹಾರ್ದ ಸಹಕಾರಿಗಳಿಂದ 28 ಪ್ರತಿನಿಧಿಗಳು ಭಾಗವಹಿಸಿದ್ದರು.

ಗದಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಸಭೆಯು ಹುಲಕೋಟಿಯ ಕೆ.ಹೆಚ್.ಪಾಟೀಲ ಕೃಷಿವಿಜ್ಞಾನ ಕೇಂದ್ರದಲ್ಲಿ ದಿನಾಂಕ 15–12–2010 ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕ ಶ್ರೀ ಆರ್.ಎನ್. ದೇಶಪಾಂಡೆ ಯವರು ಭಾಗವಹಿಸಿದ್ದರು. ಜಿಲ್ಲೆಯ 10 ಸೌಹಾರ್ದ ಸಹಕಾರಿಗಳ 24 ಪ್ರತಿನಿಧಿಗಳು ಭಾಗವಹಿಸಿದ್ದರು.



ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನ ಸಭೆ



ಸಾಗರದ ಕೃಷಿಕ ಸೌಹಾರ್ದ ಸಹಕಾರಿಗೆ ಆರ್.ಬಿ.ಐ. ಅಧಿಕಾರಿಗಳ ಭೇಟಿ

## ಸೌಹಾರ್ದ ಸಹಕಾರಿಗಳಿಗೆ ಭೇಟಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರು ದಿನಾಂಕ 14–12–2010 ದಾವಣಗೆರೆಯ ಕರಾವಳಿ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳ ಬಗ್ಗೆ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಶ್ರೀ ನಾಗರಾಜಶೆಟ್ಟಿಯವರು ಉಪಸ್ಥಿತರಿದ್ದು ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಸಹಕಾರಿಯ ನಿರ್ದೇಶಕ ಮಂಡಳಿ ಸದಸ್ಯರು ಸಿಬ್ಬಂದಿಯವರು ಉಪಸ್ಥಿತರಿದ್ದರು.

ಹರಿಹರದ ಶ್ರೀ ಆಂಜನೇಯ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ಹಾಗೂ ಇ–ಸ್ಟಾಂಪಿಂಗ್ ಕಾರ್ಯವಿಧಾನವನ್ನು ಪರಿಶೀಲಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹಕಾರಿಯ ನಿರ್ದೇಶಕ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ವಿಶ್ವಾಸ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಭೇಟಿನೀಡಿ ಇ–ಸ್ಟಾಂಪಿಂಗ ವಿಭಾಗದ ಕಾರ್ಯಚಟುವಟಿಕೆಗಳನ್ನು ಹಾಗೂ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು.

ಇದೇ ಸಂದರ್ಭದಲ್ಲಿ ಮೊಳಕಾಲ್ಮೂರು ಸೌಹಾರ್ದ ಪತ್ತಿನ ಸಹಕಾರಿಯ ಇ–ಸ್ಟಾಂಪಿಂಗ ವಿಭಾಗವನ್ನು ಶ್ರೀ ಗುರುನಾಥ ಜ್ಯಾಂತಿಕರರವರು ಉದ್ಘಾಟಿಸಿದರು. ಶ್ರೀಯುತರಿಗೆ ಸಹಕಾರ ರತ್ನ ಪ್ರಶಸ್ತಿ ಲಭಿಸಿರುವ ಹಿನ್ನೆಲೆಯಲ್ಲಿ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.ಶ್ರೀ ವಾಸವಿ ಸೌಹಾರ್ದ ಸಹಕಾರಿಗೆ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರ ಹಾಗೂ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ಪರೀಶಿಲಿಸಿದರು.



ವಾಸವಿ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರ ಭೇಟಿ



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಮಾಬಾಮ್ಕೋಸ್‌ನ ಉಪಾಧ್ಯಕ್ಷ ಶ್ರೀ ನರಸಿಂಹ ನಾಯಕ್ ಭೇಟಿ.



**ಎಮ್.ಎನ್. ಅಶ್ವತ್ಥನಾರಾಯಣ**
ನಿವೃತ್ತ ಅಪರ ನಿಬಂಧಕರು, ಸಹಕಾರ ಇಲಾಖೆ.

# ಸಹಕಾರಿ ಸಂಸ್ಥೆಗಳಲ್ಲಿ ಆಯವ್ಯಯ

ಒಂದು ಪ್ರಬಲವಾದ ಆರ್ಥಿಕ ಸಂಸ್ಥೆಯಾಗಿ ಬೆಳೆಯಬೇಕಾದರೆ ಯಾವುದೇ ಸಂಸ್ಥೆಗಾಗಲೀ ಯೋಜಿತವಾದ ಕಾರ್ಯಕ್ರಮ ಅಗತ್ಯ. ಈ ಕಾರ್ಯಕ್ರಮ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕಾಲಗಳದ್ದು ಆಗಿರಬೇಕಾದ್ದು ಸಹ ಅತ್ಯವಶ್ಯ. ಈ ಯೋಜಿತ ಕಾರ್ಯಕ್ರಮಗಳಲ್ಲಿ ಆಯಾ ಸಂಘದ ಧ್ಯೇಯ ಉದ್ದೇಶಗಳಿಗೆ ಸಂಭಂಧಪಟ್ಟ ಹಾಗೆ ಮೈಲಿಗಲ್ಲುಗಳ ರೀತಿಯಲ್ಲಿ ಗುರಿಗಳನ್ನು ಹಾಕಿಕೊಳ್ಳುವುದು ಅತ್ಯಂತ ಅವಶ್ಯ, ನಂತರ ಅದಕ್ಕೆ ತಕ್ಕಂತೆ ಹಣಕಾಸಿನ ಪೂರೈಕೆ ಹೂಡಿಕೆ, ವಸೂಲಿ, ಆದಾಯ ಮುಂತಾದ ಲೆಕ್ಕಾಚಾರದ ಕೆಲಸ ಆಗಬೇಕಾಗುತ್ತದೆ. ಹೀಗೆ ಹಣಕಾಸಿನ ಲೆಕ್ಕಾಚಾರಗಳನ್ನು ಒಂದು ನಿರ್ದಿಷ್ಟ ಅವಧಿಗೆ, ಎಷ್ಟು ಖರ್ಚು ಮಾಡಬೇಕು, ಎಷ್ಟು ವಾಪಸ್ ಬರುತ್ತದೆ, ಆದಾಯವು ಖರ್ಚಿಗಿಂತ ಹೆಚ್ಚೋ, ಕಡಿಮೆಯೋ ಎಂಬುದನ್ನು ವೈಜ್ಞಾನಿಕವಾದ ರೀತಿಯಲ್ಲಿ ಮುಂಚಿತವಾಗಿಯೇ ತಯಾರಿಸುವ ವಿಧಾನವೇ ನಾವು ಆಯವ್ಯಯ ಎನ್ನುವ ಒಂದು ವ್ಯವಸ್ಥೆಗೆ ಆಧಾರವಾಗಿದೆ.

ನಮಗೆಲ್ಲರಿಗೂ ತಿಳಿದಿರುವಂತೆ ಸಹಕಾರಿ ಸಂಸ್ಥೆ ಮೂಲತಃ ಒಂದು ಆರ್ಥಿಕ ಸಂಸ್ಥೆ. ಆದ್ದರಿಂದಲೇ ಆರ್ಥಿಕವಾಗಿ ಯಶಸ್ವಿಯಾಗುವ ಸಾಧ್ಯತೆಗಳು ಒಂದು ಸಹಕಾರಿ ಸಂಘ ನೋಂದಣಿಯಾಗುವ ಸಮಯದಲ್ಲಿ ಕಾಣದಿದ್ದರೆ ಅಂತಹ ಸಂಘವನ್ನು, ಅದು ಸೌಹಾರ್ದ ಸಹಕಾರಿ ಕಾಯಿದೆಯಲ್ಲಿಯೇ ಆಗಿರಲಿ ಅಥವಾ 1959ರ ಮೂಲ ಸಹಕಾರಿ ಸಂಘಗಳ ಕಾಯಿದೆಯಲ್ಲಿಯೇ ಆಗಿರಲಿ, ನೋಂದಣಿ ಮಾಡಲು ನಿಬಂಧಕರು ನಿರಾಕರಿಸಬಹುದು. ಆದರೆ ನಮ್ಮಲ್ಲಿ ಸಹಕಾರಿ ಸಂಘ ಎಂದರೆ ಒಂದು ಸೇವಾ ಸಂಸ್ಥೆ ಎಂಬ ಒಂದು ಪರಿಕಲ್ಪನೆ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಅದು ಮೂಲತಃ ಆರ್ಥಿಕ ಸಂಸ್ಥೆ ಎಂಬ ವಾಸ್ತವವನ್ನೇ ಮರೆಸುವಮಟ್ಟಿಗೆ ಗಟ್ಟಿಯಾಗಿದೆ. ಏಕೆ ಹೀಗಾಗಿದೆ ಎನ್ನುವುದು ಒಂದು ಪ್ರಶ್ನೆ, ಬಹುಶಃ ಇದು ಸರ್ವಿಸ್ ಎಂಬ ಒಂದು ಇಂಗ್ಲೀಷ ಪದವನ್ನು ಕನ್ನಡಕ್ಕೆ ಅನುವಾದಿಸುವಾಗ ಆದ ಕೆಲಸವಿರಬೇಕು. ಕನ್ನಡದಲ್ಲಿ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಸಹ ಸೇವೆ ಎಂಬ ಪದಕ್ಕೆ ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುವ ಕೆಲಸ ಎಂಬ ಅರ್ಥ ಸಾಧಾರಣವಾಗಿ ಬಳಕೆಯಲ್ಲಿದೆ.

ಇದು ಒಂದು ಉದಾತ್ತವಾದ ಅರ್ಥ. ಅದರ ಉದಾತ್ತವಾದ ಅರ್ಥದಲ್ಲಿ ಸೇವೆ ಎಂಬ ಪದವನ್ನು ಗುರುಸೇವೆ, ದೇಶಸೇವೆ, ದೇವಸೇವೆ ಮುಂತಾದ ರೀತಿಯಲ್ಲಿ ಬಳಸುತ್ತೇವೆ. ಆದರೆ ಅದಕ್ಕೆ ಉದಾತ್ತವಲ್ಲದ ಇನ್ನೊಂದು ಅರ್ಥವೂ ಬಳಕೆಯಲ್ಲಿದೆ. ಆ ಅರ್ಥದಲ್ಲಿ ಸೇವೆ ಎಂದರೆ ಕೈಂಕರ್ಯ. ಎಂದರೆ ಕಿಂಕರ ಮಾಡುವ ಕೆಲಸ. ಕಿಂಕರ ಎಂದರೆ ಆಳು, ಸೇವಕ ಎಂದರ್ಥ. ಒಡೆಯನ ಸೇವೆಯನ್ನು ಆಳು ವಿನಯ, ವಿಧೇಯತೆಗಳಿಂದ ಮಾಡಬೇಕು. ಪ್ರಸ್ತುತ ಉದಾತ್ತವಲ್ಲದ ಈ ಅರ್ಥವನ್ನು ಬಿಟ್ಟುಬಿಡೋಣ. ಉದಾತ್ತವಾದ ಅರ್ಥವನ್ನೇ ತೆಗೆದುಕೊಳ್ಳೋಣ. ಸಹಕಾರ ಸಂಘಗಳು ಈ ರೀತಿ ಸೇವೆ ಮಾಡಬೇಕೇ? ಯಾರ ಸೇವೆ ಮಾಡಬೇಕು? ಪ್ರತಿಫಲಾಪೇಕ್ಷೆ ಇಲ್ಲದೆ ಅದು ಸಾರ್ವಜನಿಕರ ಸೇವೆ ಮಾಡಬೇಕು, ಬಡವರ ಸೇವೆ ಮಾಡಬೇಕು ಎಂಬೆಲ್ಲಾ ಕಲ್ಪನೆಗಳು ಇಂದಿಗೂ ಬಹಳ ಜನರ ಮನಸ್ಸಿನಲ್ಲಿ ಉಳಿದುಕೊಂಡಿದೆ.

ಆದರೆ ಸರ್ವಿಸ್ ಎಂಬ ಇಂಗ್ಲೀಷ ಪದ, ಆರ್ಥಿಕ ಕ್ಷೇತ್ರದಲ್ಲಿ, ಸೌಲಭ್ಯಗಳನ್ನು ಒದಗಿಸುವುದು ಎಂಬ ಅರ್ಥದಲ್ಲಿ ಉಪಯೋಗವಾಗುತ್ತದೆ. ಬ್ಯಾಂಕಿಂಗ್ ಸರ್ವಿಸ್ ಎಂದರೆ ಬ್ಯಾಂಕ್‌ಗಳು ಒದಗಿಸುವ ಸೌಲಭ್ಯ. ಇದೇ ರೀತಿ ಬಸ್ ಸರ್ವಿಸ್, ಏರ್ ಸರ್ವಿಸ್, ಮೆಡಿಕಲ್ ಸರ್ವಿಸ್ ಮುಂತಾದ ಶಬ್ದಗಳು ಸಾರಿಗೆ ಸೌಲಭ್ಯ, ವಿಮಾನ ಪ್ರಯಾಣ ಸೌಲಭ್ಯ ಮುಂತಾದ ರೀತಿಯಲ್ಲಿ ಬಳಸಲ್ಪಡುತ್ತವೆ. ಇವೆಲ್ಲವೂ ಲಾಭದಾಯಕವಾದ ರೀತಿಯಲ್ಲಿ ನಡೆಸಲ್ಪಡುತ್ತಿರುವ ಉದ್ಯಮಗಳು. ಇದೇ ರೀತಿ ಸಹಕಾರ ಸಂಘವೂ ಸಹ, ಸರ್ವಿಸ್–ಎಂದರೆ–ಸೌಲಭ್ಯವನ್ನು ನೀಡಬೇಕಾದ ಸಂಸ್ಥೆ. ಈ ಸೌಲಭ್ಯವನ್ನು ಅದು ತನ್ನ ಸದಸ್ಯರಿಗೆ–ಎಲ್ಲ ಸಾರ್ವಜನಿಕರಿಗೆ ಒದಗಿಸಬೇಕು. ಈ ಸೌಲಭ್ಯವನ್ನು ಅದು ತನ್ನ ಸದಸ್ಯರಿಗೆ ನಿರಂತರವಾಗಿ ಒದಗಿಸುತ್ತಿರುವ ಒಂದು ಆರ್ಥಿಕ ಸಂಸ್ಥೆಯಾಗಿ ಬೆಳೆಯಬೇಕಾದರೆ ಅದು ಲಾಭದಾಯಕವಾಗಿಯೇ ಬೆಳೆಯಬೇಕು. ಸದಸ್ಯರು ಅದರಲ್ಲಿ ಹೂಡಿರುವ ಹಣಕ್ಕೆ ಲಾಭಾಂಶವನ್ನೂ ನೀಡಬೇಕು. ಸಹಕಾರಿ ಸಂಘಗಳು ಹಣದ ಶೇ. 25ರವರೆಗೂ ಲಾಭಾಂಶ ನೀಡಲು ಮೂಲ ಕಾಯಿದೆಯಲ್ಲಿ ಅವಕಾಶ ಇದೆ. ಸೌಹಾರ್ದ ಕಾಯಿದೆಯಲ್ಲಿ ಯಾವ ಮಿತಿಯೂ ಇಲ್ಲ, ಸೌಹಾರ್ದ ಸಹಕಾರಿ ಸಂಘಗಳು ಶೇ. 25ರವರೆಗೂ ಲಾಭಾಂಶ ನೀಡುತ್ತಿವೆ. ಇವುಗಳನ್ನು ಬರೆದದ್ದರ ಉದ್ದೇಶ ಏನು ಎಂದರೆ ಬಹಳ ಸಹಕಾರಿ ಸಂಘಗಳು ಒಂದು ಆರ್ಥಿಕ ಸಂಸ್ಥೆಯಾಗಿ ಬೆಳೆದು ಖಾಸಗಿ ಹಣಕಾಸಿನ ಸಂಸ್ಥೆಗಳ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿ ಸದಸ್ಯರಿಗೆ ಉತ್ತಮ ಪ್ರತಿಫಲವನ್ನು ನೀಡುತ್ತಿವೆಯಾದರೂ ಸಹ ಈ ರೀತಿ ಆರ್ಥಿಕ ಯಶಸ್ಸನ್ನು ಸಾಧಿಸದೆ ಇರುವ ಸಂಘಗಳ ಸಂಖ್ಯೆಯೂ ಸಾಕಷ್ಟು ದೊಡ್ಡದಿದೆ ಎಂಬುದನ್ನು ನೆನಪಿಸಿಕೊಳ್ಳುವ ಸಲುವಾಗಿ. ಈ ರೀತಿ ಒಂದು ಪ್ರಬಲವಾದ ಆರ್ಥಿಕ ಸಂಸ್ಥೆಯಾಗಿ ಬೆಳೆಯಬೇಕಾದರೆ ಯಾವುದೇ ಸಂಸ್ಥೆಗಾಗಲೀ ಯೋಜಿತವಾದ ಕಾರ್ಯಕ್ರಮ ಅಗತ್ಯ. ಈ ಕಾರ್ಯಕ್ರಮ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕಾಲಗಳದ್ದು ಆಗಿರಬೇಕಾದ್ದು ಸಹ ಅತ್ಯವಶ್ಯ. ಈ ಯೋಜಿತ ಕಾರ್ಯಕ್ರಮಗಳಲ್ಲಿ ಆಯಾ ಸಂಘದ ಧ್ಯೇಯ ಉದ್ದೇಶಗಳಿಗೆ ಸಂಭಂಧಪಟ್ಟ ಹಾಗೆ ಮೈಲಿಗಲ್ಲುಗಳ ರೀತಿಯಲ್ಲಿ ಗುರಿಗಳನ್ನು ಹಾಕಿಕೊಳ್ಳುವುದು ಅತ್ಯಂತ ಅವಶ್ಯ, ನಂತರ ಅದಕ್ಕೆ ತಕ್ಕಂತೆ ಹಣಕಾಸಿನ ಪೂರೈಕೆ ಹೂಡಿಕೆ, ವಸೂಲಿ, ಆದಾಯ ಮುಂತಾದ ಲೆಕ್ಕಾಚಾರದ ಕೆಲಸ ಆಗಬೇಕಾಗುತ್ತದೆ. ಹೀಗೆ ಹಣಕಾಸಿನ ಲೆಕ್ಕಾಚಾರಗಳನ್ನು ಒಂದು ನಿರ್ದಿಷ್ಟ ಅವಧಿಗೆ, ಎಷ್ಟು ಖರ್ಚು ಮಾಡಬೇಕು, ಎಷ್ಟು ವಾಪಸ್ ಬರುತ್ತದೆ, ಆದಾಯವು ಖರ್ಚಿಗಿಂತ ಹೆಚ್ಚೋ, ಕಡಿಮೆಯೋ ಎಂಬುದನ್ನು ವೈಜ್ಞಾನಿಕವಾದ ರೀತಿಯಲ್ಲಿ ಮುಂಚಿತವಾಗಿಯೇ ತಯಾರಿಸುವ ವಿಧಾನವೇ ನಾವು ಆಯವ್ಯಯ ಎನ್ನುವ ಒಂದು ವ್ಯವಸ್ಥೆಗೆ ಆಧಾರವಾಗಿದೆ.

ಅನಾದಿ ಕಾಲದಿಂದಲೂ ಎಲ್ಲ ದೇಶಗಳಲ್ಲೂ ಈ ವ್ಯವಸ್ಥೆಯನ್ನು ಅನುಸರಿಸುತ್ತಿದ್ದಾರೆ. ಏಕೆಂದರೆ ವಾಣಿಜ್ಯ, ವಹಿವಾಟು ಮುಂತಾದವು ಸಾವಿರಾರು ವರ್ಷಗಳಿಂದ ನಡೆದುಬಂದಿರುವ ವ್ಯವಸ್ಥೆಯಾಗಿದೆ. ಆದರೆ ನಾವು ಇಂದು ಮಾಡುತ್ತಿರುವ ರೀತಿ ನಮಗೆ ಪಶ್ಚಿಮ ಜಗತ್ತಿನಿಂದ–ಇಂಗ್ಲೀಷರ ಮೂಲಕ ಆಮದಾದದ್ದು. ಅದ್ದರಿಂದ ಆಯವ್ಯಯದ ಇಂಗ್ಲೀಷರ ಹಿನ್ನಲೆ ಒಂದು ಆಸಕ್ತಿಕರವಾದ ಹಿನ್ನೆಲೆ ಆಗುತ್ತದೆ.

ಇಂದು ನಮಗೆ ಬಹುಶಃ ಕನ್ನಡಕ್ಕಿಂತಲೂ ಇಂಗ್ಲೀಷ ಪದಗಳೇ ಹೆಚ್ಚು ಪರಿಚಿತವಾಗುತ್ತಿವೆ ಎನ್ನುವ ರೀತಿಯಲ್ಲಿ ಇಂದು ವಿದ್ಯಮಾನಗಳು ಬೆಳೆಯುತ್ತಿವೆ. ಅನೇಕ ಕನ್ನಡ ದಿನ ಪತ್ರಿಕೆಗಳು ಮತ್ತು ಟಿವಿ ವಾಹಿನಿಗಳೂ ಈ ಬೆರಕೆಯನ್ನೇ ವೈಭವೀಕರಿಸಿ ಪೋಷಿಸುತ್ತಿವೆ. ಇಂದು "ಬಜೆಟ್" ಎಂಬ ಇಂಗ್ಲೀಷ ಪದ ಆಯವ್ಯಯ ಅಥವಾ ಆಯವ್ಯಯ ಪತ್ರಿಕೆ ಎನ್ನುವ ಅರ್ಥದಲ್ಲಿ ಚೆನ್ನಾಗಿ ಬಳಕೆಯಲ್ಲಿದೆ. ಬಹುಶಃ ಸಾಮಾನ್ಯ ಜನಕ್ಕೆ ಕನ್ನಡದಲ್ಲಿ ಆಯವ್ಯಯ ಎಂದು

**–12ನೇ ಪುಟಕ್ಕೆ**

# ಜನವರಿ 1 ರಾಜ್ಯಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ



ಸಂಯುಕ್ತ ಸಹಕಾರಿಯ ಕೇಂದ್ರ ಕಚೇರಿಯ ಆವರಣದಲ್ಲಿ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರು ಸಪ್ತವರ್ಣದ ಸಹಕಾರಿ ಧ್ವಜಾರೋಹಣ ಮಾಡಿ ನಂತರದಲ್ಲಿ "ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ" ಯನ್ನು ಭೋದಿಸಿದರು. ಸಹಕಾರ ಗೀತೆಯನ್ನು ಸಾಮೂಹಿಕವಾಗಿ ಹಾಡಲಾಯಿತು. ಸಿಹಿ ವಿತರಣೆ ಮಾಡಲಾಯಿತು.

ನಂತರದಲ್ಲಿ ಅಧ್ಯಕ್ಷರು ಮಾತನಾಡಿ ಕರ್ನಾಟಕದಲ್ಲಿ 2001 ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 1 ರಂದು ಜಾರಿಗೆ ಬಂದಿದೆ. ಅದರ ಜ್ಞಾಪಕಾರ್ಥವಾಗಿ ಜನವರಿ 1 ರಂದು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತದೆ ರಾಜ್ಯಾದ್ಯಂತ ಎಲ್ಲ ಸೌಹಾರ್ದ ಸಹಕಾರಿಗಳು ಈ ದಿನವನ್ನು ಆಚರಿಸುವುದರ ಮೂಲಕ ಸೌಹಾರ್ದ ಸಹಕಾರಿಗಳು ಸಮಾಜದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಂತಾಗಬೇಕು ನಮ್ಮ ಅಸ್ತಿತ್ವದ ಬಗ್ಗೆ ಸಮಾಜದಲ್ಲಿ ಅರಿವು ಮೂಡಬೇಕು. ಸಹಕಾರಿಗಳು ಇದೊಂದು ಉತ್ತಮ ಆರ್ಥಿಕ ಸಂಘಟನೆಗಳು ಎಂದು ಗುರುತಿಸಬೇಕು ಈ ಬಗ್ಗೆ ನಾವೆಲ್ಲರೂ ಒಂದಾಗಿ ಕಾರ್ಯ ನಿರ್ವಹಿಸೋಣ ಎಂದು ಕರೆನೀಡಿದರು.



ಶಿವಮೊಗ್ಗ ಜಿಲ್ಲೆಯ ಕವಲೇದುರ್ಗ ಬಹು ಉದ್ದೇಶಿ ಸೌಹಾರ್ದ ಸಹಕಾರಿಯ ಉದ್ಘಾಟನಾ ಸಮಾರಂಭ.



ನವಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ಶಿಗ್ಗಾಂವದಲ್ಲಿ ಇ-ಸ್ಟಾಂಪಿಂಗ್ ವ್ಯವಹಾರ ಪ್ರಾರಂಭ.



ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಸಹಕಾರಿ ಮಹಾಮಂಡಳದಲ್ಲಿ ದಿನಾಂಕ : 14-12-2010 ರಂದು 57 ನೇ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರೆಲ್ಲರಿಗೂ ಅಭಿನಂಧಿಸಲಾಯಿತು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರನ್ನೂ ಅಭಿನಂದಿಸಲಾಯಿತು. ಚಿತ್ರದಲ್ಲಿ ಎಣ್ಣೆಬೀಜ ಮಹಾಮಂಡಳಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನರೆಡ್ಡಿ ಹಾಗೂ ನಿರ್ದೇಶಕರು ಇದ್ದಾರೆ.



ಕಾವೇರಿ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನ ಆಚರಣೆ

## "ಆದರ್ಶ ಸಂಸ್ಥಾ" ಪ್ರಶಸ್ತಿ ಪುರಸ್ಕಾರ



ದಿನಾಂಕ : 28-11-2010ರಂದು ಬೋರಗಾಂವದಲ್ಲಿ ನಡೆದ "ದಕ್ಷಿಣ ಭಾರತ ಜೈನ ಸಭಾ" ಇದರ 91ನೇ ತ್ರೈವಾರ್ಷಿಕ ಅಧಿವೇಶನದಲ್ಲಿ "ಆದರ್ಶ ಸಂಸ್ಥಾ" ಪುರಸ್ಕಾರವನ್ನು ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸ್ವೀಕರಿಸುತ್ತಿರುವುದು.

### ಸೌಹಾರ್ದ ಸಹಕಾರಿ ದಿನ ಶುಭಹಾರೈಕೆಗಳು



ಶ್ರೀ ಸಿ.ಎನ್. ಪರಶಿವಮೂರ್ತಿ
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ನಿರೀಕ್ಷಿಸಿದಷ್ಟು ಬೆಳದಿಲ್ಲವಾದರೂ ಸಮಾಧಾನಕರವಾಗಿದೆ ಬೆಳೆಯಲು ಸಾಕಷ್ಟು ಅವಕಾಶಗಳಿವೆ. ಅವಕಾಶಗಳನ್ನು ಉಪಯೋಗಿಸಿಕೊಂಡು ಸಹಕಾರಿಗಳು ಬೆಳೆಯಬೇಕು. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಶುಭ ಹಾರೈಕೆಗಳು.



## ಯಡಗೆರೆ "ಉತ್ತಮ ಸೌಹಾರ್ದ ಸಹಕಾರಿ" ಪ್ರಶಸ್ತಿ

ಚಿಕ್ಕಮಗಳೂರು ಜಿಲ್ಲೆಯ ಯಡಗೆರೆ ಸೌಹಾರ್ದ ಸಹಕಾರಿಯನ್ನು ಜಿಲ್ಲೆಯ ಉತ್ತಮ ಸೌಹಾರ್ದ ಸಹಕಾರಿಯೆಂದು ದಿನಾಂಕ 19-11-2010 ರಂದು ನಡೆದ 57 ನೇ ಅಖಿಲ ಭಾರತ ಸೌಹಾರ್ದ ಸಹಕಾರಿ ಸಪ್ತಾಹ ಆಚರಣೆಯ ಸಂದರ್ಭದಲ್ಲಿ ಗೌರವಿಸಲಾಯಿತು.

## ಯುವ ಸಹಕಾರಿ ಚೇತನ ಪ್ರಶಸ್ತಿ

ಇದೇ ಸಂದರ್ಭದಲ್ಲಿ ಯಡಗೆರೆ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಯಡಗೆರೆ ಸುಬ್ರಮಣ್ಯರವರಿಗೆ ಸಹಕಾರಿ ಯುವ ಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಆರ್.ಬಿ.ಐ ಅಧಿಕಾರಿಗಳೊಡನೆ ಸಮಾಲೋಚನೆ

## ಥರ್ಡ್ ಪಾರ್ಟಿ ಚೆಕ್ ಕಲೆಕ್ಶನ್ ಚೆಕ್ ಮೊತ್ತದ ಮಿತಿ ಹೆಚ್ಚಿಸಲು ಮನವಿ

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್‌ರವರು ಮಂಬಯಿಯಲ್ಲಿ ಆರ್.ಬಿ.ಐ. ಬ್ಯಾಂಕಿಗ್ ಆಪರೇಶನ್ ವಿಭಾಗದ ಉಪಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ಉಷಾ ಜಾನಕಿರಾಮನ್ ರವರನ್ನು ಅವರ ಕಚೇರಿಯಲ್ಲಿ ಭೇಟಿಮಾಡಿ ಪತ್ತಿನ ಸಹಕಾರಿ ಸಂಘಗಳಿಗೆ/ಸೌಹಾರ್ದ ಸಹಕಾರಿಗಳಿಗೆ ಥರ್ಡ ಪಾರ್ಟಿ ಚೆಕ್ ಕಲೆಕ್ಶನ್ಗೆ ಅನುಮತಿ ನೀಡಿರುವುದರಿಂದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಇನ್ನೊಬ್ಬ ಅಧಿಕಾರಿ ರೂರಲ್ ಪ್ಲಾನಿಂಗ & ಕ್ರೆಡಿಟ್ ವಿಭಾಗದ ಶ್ರೀ ರಮೇಶಕುಮಾರ ಮೂಲಚಂದಾನಿ ಯವರು ಉಪಸ್ಥಿತರಿದ್ದು ಉಪಯುಕ್ತ ಸಲಹೆಗಳನ್ನು ನೀಡಿದರು.

ಇದೇ ಸಂದರ್ಭದಲ್ಲಿ ರೂ 50,000 ಗಳ ಮಿತಿಯನ್ನು ಹೆಚ್ಚಿಸಿ ಕನಿಷ್ಟ 2,00,000 ರೂಗಳ ವರೆಗೆ ಅನುಮತಿಸಲು ಕೋರಲಾಯಿತು. ಈ ಸಂದರ್ಭದಲ್ಲಿ ಆರ್.ಬಿ.ಐ ಅಧಿಕಾರಿಗಳು "ನಿಮ್ಮ ಗ್ರಾಹಕರನ್ನು ನೀವು ತಿಳಿಯಿರಿ" know your customer norms ವಿಷಯವನ್ನು ಅಚ್ಚುಕಟ್ಟಾಗಿ ಪಾಲಿಸಿರಿ. ಥರ್ಡ ಪಾಟಿ ಚೆಕ್ ಕಲೆಕ್ಶನ್ ಮೊತ್ತದ ಮಿತಿಯನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

## ಇ-ಸ್ಟಾಂಪಿಂಗ್ ಕಮೀಶನ್ ಹೆಚ್ಚಿಸಲು ಮನವಿ

ಮುಂಬೈನ ಸ್ಟಾಕ್ ಹೊಲ್ಡಿಂಗ ಕಾರ್ಪೋರೇಶನ್‌ಗೆ ಭೇಟಿ ನೀಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್‌ರವರು ಕರ್ನಾಟಕದ ಸೌಹಾರ್ದ ಸಹಕಾರಿಗಳಲ್ಲಿ ಇ-ಸ್ಟಾಂಪಿಂಗ ವ್ಯವಹಾರಗಳಲ್ಲಿ ಸಮಸ್ಯೆಗಳನ್ನು ಕುರಿತು ಹಿರಿಯ ಉಪಾಧ್ಯಕ್ಷ ಶ್ರೀ ಉಮೇಶ ಪುಂಡೆ, ಹಿರಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಶ್ರೀ ಆರ್.ಎಚ್.ಮೆವಾವಾಲಾ ಉಪಾಧ್ಯಕ್ಷ ಶ್ರೀ ಶ್ರೀಕಾಂತ ಪಟವರ್ಧನ ಇವರುಗಳೊಡನೆ ಚರ್ಚಿಸಿದರು.

ಭೇಟಿಯ ಸಮಯದಲ್ಲಿ ಬೆಂಗಳೂರು ವಿಭಾಗದ ಅಧಿಕಾರಿ ಶ್ರೀ ರವಿಕುಮಾರರವರು ಉಪಸ್ಥಿತರಿದ್ದರು. ಇ-ಸ್ಟಾಂಪಿಂಗ ವ್ಯವಹಾರದಲ್ಲಿ ಕಮೀಶನು ತುಂಬ ಕಡಿಮೆಯಿದ್ದು ಸೌಹಾರ್ದ ಸಹಕಾರಿಗಳಿಗೆ ಲಾಭವೇ ಸಿಗುತ್ತಿಲ್ಲ. ಹೀಗಾಗಿ ಕಮೀಶನ್ ಪ್ರಮಾಣ ಹೆಚ್ಚಿಸಿದರೆ ಮಾತ್ರ ಇ-ವ್ಯವಹಾರದಲ್ಲಿ ಕೊಂಚ ಲಾಭವಾಗುತ್ತದೆ, ಈ ಬಗ್ಗೆ ಬೇಗ ಗಮನ ಹರಿಸಲು ವಿನಂತಿಸಿದರು.

। ಸ್ವಾಯತ್ತತೆ । ಸ್ವಯಂ ಆಡಳಿತ । ಸ್ವಯಂ ನಿಯಂತ್ರಣ । ನಮ್ಮ ಧ್ಯೇಯ ।

# ಸ್ವಾಭಿಮಾನಿ ಸಹಕಾರಿ


ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ನಿರ್ಮಾಣ ಭವನ, ಡಾ. ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 10,
ದೂ : +91–80–2212 7003/04, ವಿಭಾಗೀಯ ಕಛೇರಿ : ಬೆಳಗಾವಿ ದೂ : 0831–2401551.
e-mail : souharda@souharda.coop, www.souharda.coop


# 2011

## ದಶಮಾನೋತ್ಸವ ವರ್ಷ



## ಜನವರಿ

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | | 1 |
| 2 | 3 | 4• | 5 | 6 | 7 | 8 |

## ಫೆಬ್ರವರಿ

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2• | 3 | 4 | 5 |
| 6 | 7 | 8 | 9 | 10 | 11 | 12 |

## ಮಾರ್ಚ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4• | 5 |
| 6 | 7 | 8 | 9 | 10 | 11 | 12 |

ಜನವರಿ 15 – ಮಕರ ಸಂಕ್ರಾಂತಿ
26 – ಗಣರಾಜ್ಯ ದಿನ

ಫೆಬ್ರವರಿ 16 – ಈದ್ ಮಿಲಾದ್

ಮಾರ್ಚ್ 2 – ಮಹಾ ಶಿವರಾತ್ರಿ

| | | | | | | |
|---|---|---|---|---|---|---|
| 9 | 10 | 11 | 12 | 13 | 14 | 15 |
| 16 | 17 | 18 | 19○ | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

| | | | | | | |
|---|---|---|---|---|---|---|
| 13 | 14 | 15 | 16 | 17 | 18○ | 19 |
| 20 | 21 | 22 | 23 | 24 | 25 | 26 |
| 27 | 28 | | | | | |

| | | | | | | |
|---|---|---|---|---|---|---|
| 13 | 14 | 15 | 16 | 17 | 18 | 19○ |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ಏಪ್ರಿಲ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3● | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18○ | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ಮೇ

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3● | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17○ | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಜೂನ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1● | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15○ | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

## ಜುಲೈ

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1● | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15○ | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29● | 30 |
| 31 | | | | | | |

## ಆಗಸ್ಟ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13○ |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29● | 30 | 31 | | | |

## ಸೆಪ್ಟೆಂಬರ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12○ | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27● | 28 | 29 | 30 | |

## ಅಕ್ಟೋಬರ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11○ | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26● | 27 | 28 | 29 |
| 30 | 31 | | | | | |

## ನವೆಂಬರ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10○ | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25● | 26 |
| 27 | 28 | 29 | 30 | | | |

## ಡಿಸೆಂಬರ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10○ |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24● |
| 25 | 26 | 27 | 28 | 29 | 30 | 31 |

ಏಪ್ರಿಲ್
4 – ಚಾಂದ್ರಮಾನ ಯುಗಾದಿ
12 – ಶ್ರೀರಾಮ ನವಮಿ
14 – ಸೌರಮಾನ ಯುಗಾದಿ
– ಅಂಬೇಡ್ಕರ್ ಜಯಂತಿ
16 – ಮಹಾವೀರ ಜಯಂತಿ
22 – ಗುಡ್ ಫ್ರೈಡೇ

ಮೇ
1 – ಕಾರ್ಮಿಕ ದಿನಾಚರಣೆ
6 – ಬಸವ ಜಯಂತಿ
8 – ಶಂಕರ ಜಯಂತಿ
17 – ಬುದ್ಧ ಪೌರ್ಣಿಮೆ

ಆಗಸ್ಟ್
12 – ವರಮಹಾಲಕ್ಷ್ಮೀ ವ್ರತ
15 – ಸ್ವಾತಂತ್ರ್ಯ ದಿನಾಚರಣೆ
21 – ಕೃಷ್ಣ ಜನ್ಮಾಷ್ಟಮಿ
31 – ರಂಜಾನ್
ಸ್ವರ್ಣಗೌರಿ ವ್ರತ

ಸೆಪ್ಟೆಂಬರ್
1 – ಗಣೇಶ ಚತುರ್ಥಿ
9 – ತಿರು ಓಣಂ
10 – ಅನಂತ ಪದ್ಮನಾಭ ವ್ರತ
27 – ಮಹಾಲಯ ಅಮಾವಾಸ್ಯೆ

ಅಕ್ಟೋಬರ್
2 – ಗಾಂಧೀ ಜಯಂತಿ
5 – ಆಯುಧ ಪೂಜೆ
6 – ವಿಜಯದಶಮಿ
25 – ನರಕ ಚತುರ್ದಶಿ
27 – ಬಲಿಪಾಡ್ಯಮಿ

ನವೆಂಬರ್
1 – ಕನ್ನಡ ರಾಜ್ಯೋತ್ಸವ
7 – ಬಕ್ರೀದ್
10 – ಗುರುನಾನಕ್ ಜಯಂತಿ
13 – ಕನಕದಾಸರ ಜಯಂತಿ

ಡಿಸೆಂಬರ್
6 – ಮೊಹರಂ
10 – ಹುತ್ತರಿ ಹಬ್ಬ
24 – ಕ್ರಿಸ್‌ಮಸ್ ಈವ್
25 – ಕ್ರಿಸ್ ಮಸ್ ಡೇ